16 ಸೆಪ್ಟೆಂಬರ್ 2025 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 188 ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ


# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವ ಕ್ರಮ ಪ್ರಶ್ನಿಸಿ ದಾಖಲಾಗಿದ್ದ ಪಿಐಎಲ್ ಅನ್ನು ಹೈಕೋರ್ಟ್ ಸೋಮವಾರ ವಜಾಗೊಳಿಸಿದೆ.



ದಯಾಮಾಯಿ ದೇವರೇ, ಈ ದೇಶಕ್ಕೆ ದಯಮಾಡಿ ಆನೆ ಕೊಡು... » 2



ಹಿಂದೂಗಳು ಸೌಮ್ಯ ಸ್ವಭಾವದ ಗುಣದವರು » 3



ಮುಂದಿನ ಪೀಳಿಗೆಗೆ ಅಂಬೇಡ್ಕರ್ ತತ್ವಾದರ್ಶ ಮುಖ್ಯ » 4

# ಪ್ರಜಾಪ್ರಭುತ್ವ ದುರ್ಬಲಗೊಳಿಸುವ ಹುನ್ನಾರ

## ಮತಗಳ್ಳತನಕ್ಕೆ ಅವಕಾಶ ನೀಡಬೇಡಿ | ಎಲ್ಲಾ ಜಾತಿ, ಧರ್ಮ ಸಮಾನ | ಬಿಜೆಪಿ ವಿರುದ್ಧ ಸಿದ್ದರಾಮಯ್ಯ ಕಿಡಿ

• ಪ್ರಜೋದಯ ವರದಿ

**ಬೆಂಗಳೂರು:** ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಹುನ್ನಾರ ಪಟ್ಟಭದ್ರ ಹಿತಾಸಕ್ತಿಗಳಿಂದ ನಡೆಯುತ್ತಿದ್ದು, ನಾಗರಿಕರು ಅದಕ್ಕೆ ಅವಕಾಶ ಮಾಡಿಕೊಡಬಾರದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆಯಿಂದ ಸೋಮವಾರ ಹಮ್ಮಿಕೊಂಡಿದ್ದ ಅಂತರ್‍ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಮಾತನಾಡಿದ ಅವರು, ಶ್ರೀಮಂತರಿಗೆ ಅಧಿಕಾರ ದೊರೆಯುವ ಕಾಲವೊಂದಿತ್ತು. ಈಗ ಶ್ರೀಮಂತ ಬಡವ ಬಲ್ಲಿದ ಎಂಬ ಬೇಧವಿಲ್ಲದೇ, ಎಲ್ಲರಿಗೂ ಒಂದೇ ಮತದ ಅಧಿಕಾರ ನೀಡಲಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಒಬ್ಬ ವ್ಯಕ್ತಿ, ಒಂದು ಮತ, ಒಂದು ಮೌಲ್ಯ ಎಂದಿದ್ದಾರೆ. ಆದರೆ, ಅದನ್ನು ದುರುಪಯೋಗಪಡಿಸಿಕೊಂಡು ಸಂವಿಧಾನವನ್ನು ದುರ್ಬಲಗೊಳಿಸುವ ಕುತಂತ್ರ ನಡೆಯುತ್ತಿದೆ. ಅದು ಈಡೇರದಂತೆ ನೋಡಿಕೊಳ್ಳಬೇಕಿದೆ. ಸಂವಿಧಾನದ ರಕ್ಷಣೆ ಎಲ್ಲಾ ನಾಗರಿಕರ ಜವಾಬ್ದಾರಿ. ಈ ಕರ್ತವ್ಯವನ್ನು ಎಲ್ಲರೂ ತಪ್ಪದೇ ನಿರ್ವಹಿಸಲೇಬೇಕು. ಪ್ರಜಾಪ್ರಭುತ್ವ ರಕ್ಷಣೆಯಿಂದ ದೇಶದ ರಕ್ಷಣೆ ಸಾಧ್ಯವಾಗುತ್ತದೆಂದರು.



ಬಿಜೆಪಿಯವರು ಅಧಿಕಾರ ಉಳಿಸಿಕೊಳ್ಳಲು ಮತಗಳ್ಳತನದ ಹಾದಿ ಹಿಡಿದಿದ್ದಾರೆ. ಆದ್ದರಿಂದ ನನ್ನ ಮತ ನನ್ನ ಹಕ್ಕು ಎಂಬುದು ಇಂತಹ ಸನ್ನಿವೇಶದಲ್ಲಿ ಪ್ರಮುಖವಾಗಿದೆ. ಮತಗಳ ದುರುಪಯೋಗವಾಗಬಾರದು. ಮತಗಳ್ಳತನಕ್ಕೆ ಅವಕಾಶ ನೀಡಬೇಡಿ. ಪ್ರಜಾಪ್ರಭುತ್ವ ಉಳಿಸಿ, ಹಕ್ಕುಗಳನ್ನು ರಕ್ಷಿಸುವ ಪ್ರಮಾಣವನ್ನು ಸ್ವೀಕರಿಸಲಾಗಿದೆ. ಸಂವಿಧಾನ ನೀಡುವ ಹಕ್ಕು ಹಾಗು ಕರ್ತವ್ಯಗಳ ಪಾಲನೆಯಾಗಬೇಕು. ಪ್ರಜಾಪ್ರಭುತ್ವದಲ್ಲಿ ಎಲ್ಲಾ ಜಾತಿ, ಧರ್ಮವೂ ಸಮಾನವಾಗಿದೆ. ಇಂತಹ ಸಂವಿಧಾನಕ್ಕೆ ಧಕ್ಕೆ ತರುವ ಕೆಲಸವನ್ನು ಮನುವಾದಿಗಳು ಪ್ರಯತ್ನಿಸುತ್ತಿದ್ದಾರೆ. ಸ್ವಾತಂತ್ರ್ಯ ಬಂದಾಗಿನಿಂದಲೂ ಸಂವಿಧಾನ ವಿರೋಧಿಗಳಿದ್ದಾರೆ. ಅಸಮಾನತೆ ನಿವಾರಣೆಯಾದರೆ ಶೋಷಣೆ ಸಾಧ್ಯವಿಲ್ಲವೆಂದರು.

> **ನಮ್ಮ ಜಾತಿ ವ್ಯವಸ್ಥೆಗೆ ಚಲನೆ ಇಲ್ಲದೇ, ಸಮಾಜದಲ್ಲಿ ಆಳವಾಗಿ ಬೇರೂರಿದೆ. ಆರ್ಥಿಕ, ಸಾಮಾಜಿಕ ಸಮಾನತೆ ತರದೇ ಜಾತಿ ವ್ಯವಸ್ಥೆ ನಿರ್ಮೂಲಗೊಳಿಸಲು ಸಾಧ್ಯವಿಲ್ಲ. ಎಲ್ಲರಿಗೂ ಸಮಾನ ಅವಕಾಶಗಳು ದೊರೆತಾಗ ಮಾತ್ರ ಬದಲಾವಣೆ ಸಾಧ್ಯ.**
> **-ಸಿದ್ದರಾಮಯ್ಯ, ಮುಖ್ಯಮಂತ್ರಿ**

**ಜಾತಿ ವ್ಯವಸ್ಥೆಯಿಂದ ಅಸಮಾನತೆ**

ದೇಶದಲ್ಲಿ ವಿವಿಧ ಜಾತಿ ಧರ್ಮಗಳ ವ್ಯವಸ್ಥೆ ಇದೆ. ಬಹುಸಂಸ್ಕೃತಿಯುಳ್ಳ ದೇಶದಲ್ಲಿ ವಿವಿಧತೆಯಲ್ಲಿ ಏಕತೆಯನ್ನು ಕಾಪಾಡಲು ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ತರಲಾಗಿದೆ. ಜಾತಿ ವ್ಯವಸ್ಥೆಯಿಂದಾಗಿ ಅಸಮಾನತೆ ಉಂಟಾಗಿದೆ. ಅಂಬೇಡ್ಕರ್ ಅವರು ಸಂವಿಧಾನ ಜಾರಿಯಾದ ಸಂದರ್ಭದಲ್ಲಿ ವೈರುಧ್ಯತೆ ಇರುವ ಸಮಾಜಕ್ಕೆ ನಾವು ಕಾಲಿಡುತ್ತಿದ್ದು, ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಅಸಮಾನತೆಗಳಿವೆ. ದೇಶದಲ್ಲಿ ಜನರಿಗೆ ಸಾಮಾಜಿಕ, ಶೈಕ್ಷಣಿಕ ಆರ್ಥಿಕ ಸ್ವಾತಂತ್ರ್ಯ ಸಿಕ್ಕಾಗ ಮಾತ್ರ ಸ್ವಾತಂತ್ರ್ಯ ಯಶಸ್ವಿಯಾಗುತ್ತದೆ. 12ನೇ ಶತಮಾನದಲ್ಲಿ ಅನುಭವ ಮಂಟಪ ಸ್ಥಾಪಿಸಿ ಬಸವಣ್ಣ ಅವರು ಪ್ರಜಾಪ್ರಭುತ್ವದ ಪರಿಕಲ್ಪನೆಗೆ ಜೀವ ತುಂಬಿದ್ದರು. ಅತ್ಯಂತ ತಳಸಮುದಾಯದವರಾದ ಅಲ್ಲಮ ಪ್ರಭು ಅವರನ್ನು ಅನುಭವ ಮಂಟಪದ ಅಧ್ಯಕ್ಷರಾಗಿಸಿದ್ದರು. ಅದರಲ್ಲಿ ಮಹಿಳೆಯರೂ ಸೇರಿ ಸಮಾಜದ ಎಲ್ಲಾ ವರ್ಗದವರೂ ಪ್ರಾತಿನಿಧ್ಯ ಹೊಂದಿದ್ದರು. ಎಲ್ಲಿ ಎಲ್ಲಾ ವರ್ಗದವರ ಅಭಿಪ್ರಾಯಕ್ಕೆ ಬೆಲೆ ದೊರಕುವುದೇ, ಅಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪಿತವಾಗಿದೆ ಎಂದರು.

ಸಂವಿಧಾನ ಆಶಯಗಳ ಅರಿವು ಎಲ್ಲರೂ ಹೊಂದಬೇಕೆಂಬ ದೃಷ್ಟಿಯಿಂದ ಸರ್ಕಾರ, ಎಲ್ಲಾ ಶಾಲೆಗಳಲ್ಲಿ ಸಂವಿಧಾನ ಪೀಠಿಕೆಯನ್ನು ಓದಲು ಕ್ರಮ ಕೈಗೊಳ್ಳಲಾಗಿದೆ. ಸಂವಿಧಾನವನ್ನು ಪ್ರತಿಯೊಬ್ಬರು ಅರ್ಥೈಸಿಕೊಳ್ಳಬೇಕೆಂದರು.

### ಸಿದ್ದರಾಮಯ್ಯ ಮತಾಂತರ ರಾಯಭಾರಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಮತಾಂತರದ ರಾಯಭಾರಿ. ಯಾರೂ ಯೋಚನೆ ಮಾಡದ ರೀತಿಯಲ್ಲಿ ಹೊಸ ಹೊಸ ಜಾತಿಗಳನ್ನು ಸೃಷ್ಟಿಸುತ್ತಿದ್ದಾರೆಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಆರೋಪಿಸಿದರು.

ಈ ವರೆಗೆ ಅಧಿಕೃತ ಜಾತಿ ಪಟ್ಟಿಯಲ್ಲಿಲ್ಲದ ಜಾತಿಗಳಿಗೆ ಜನ್ಮ ನೀಡಿದ್ದಾರೆ. ಹೀಗಾಗಿ ಜಾತಿ ಸಮೀಕ್ಷೆ ರದ್ದಾಗುವ ಸಾಧ್ಯತೆ ಹೆಚ್ಚು ಎಂದು ಹೇಳಿದರು.

ಹಿಂದೂಗಳಲ್ಲಿ ತಪ್ಪು ಇದೆ ಎಂದಿದ್ದಾರೆ. ಹಾಗಿದ್ದರೆ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳಲ್ಲಿ ತಪ್ಪು ತಾರತಮ್ಯಗಳು ಇಲ್ಲವೆ. ಅವುಗಳ ಕುರಿತೂ ಮಾತನಾಡಲಿ. ಅವರಿಗೆ ಹಿಂದೂಗಳ ಮತ ಮಾತ್ರ ಬೇಕು. ಗೆದ್ದ ನಂತರ ಹಿಂದೂಗಳನ್ನು ತುಳಿಯುವ ಕೆಲಸ ಮಾಡುತ್ತಾರೆಂದು ಟೀಕಿಸಿದರು.

# ಮೊಸಳೆಹೊಸಳ್ಳಿ ದುರಂತ ತನಿಖೆಗೆ ಸರ್ಕಾರವೇ ತಂಡ ರಚಿಸಲಿ

## ಮೃತ ಕುಟುಂಬಸ್ಥರಿಗೆ ಪರಿಹಾರ ಹೆಚ್ಚಿಸಿ | ಹೆಚ್.ಡಿ.ರೇವಣ್ಣ ಆಗ್ರಹ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಮೊಸಳೆಹೊಸಳ್ಳಿಯಲ್ಲಿ ಇತ್ತೀಚೆಗೆ ಸಂಭವಿಸಿದ ಕ್ಯಾಂಟರ್ ಅವಘಡಕ್ಕೆ ಪೊಲೀಸ್ ಇಲಾಖೆಯ ವೈಫಲ್ಯವೇ ಕಾರಣವಾಗಿದ್ದು, ಸರ್ಕಾರ ತಂಡ ರಚಿಸಿ ತನಿಖೆ ನಡೆಸಬೇಕು ಹಾಗು ಮೃತರ ಕುಟುಂಬಕ್ಕೆ ಹೆಚ್ಚಿನ ಪರಿಹಾರ ಕೊಡಬೇಕೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಆಗ್ರಹಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಪ್ರಕರಣದ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವುದಾಗಿ ಹೇಳಿದ್ದಾರೆ. ಪೊಲೀಸ್ ಇಲಾಖೆ ವೈಫಲ್ಯದಿಂದಲೇ ಅನಾಹುತ ಸಂಭವಿಸಿದೆ. ಪೊಲೀಸ್ ಇಲಾಖೆ ಸರ್ಕಾರದ ಅಧೀನದಲ್ಲಿರುವುದರಿಂದ ಇದು ಸರ್ಕಾರದ ವೈಫಲ್ಯ. ಸರ್ಕಾರವೇ ಒಂದು ತಂಡ ಕಳುಹಿಸಿ ತನಿಖೆ ನಡೆಸಲಿ ಎಂದು ಆಗ್ರಹಿಸಿದರು.

**ಬ್ಯಾರಿಕೇಡ್ ಹಾಕಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ**

ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ಬರುವ ವೇಳೆ 500 ಮೀಟರ್ ದೂರದಲ್ಲಿ ಬ್ಯಾರಿಕೇಡ್ ಹಾಕಿ ಇಬ್ಬರು ಕಾನ್ಸಟೇಬಲ್‍ಗಳನ್ನು ನಿಯೋಜಿಸಿದ್ದರೆ ಕ್ಯಾಂಟರ್ ಚಾಲಕ ಎಷ್ಟೇ ವೇಗವಾಗಿ ಬಂದರೂ ಬ್ಯಾರಿಕೇಡ್‍ಗೆ ಡಿಕ್ಕಿ ಹೊಡೆದು ಅಲ್ಲೇ ನಿಲ್ಲ ಬಹುದಿತ್ತು. ಆ ವಿಚಾರವಾಗಿ ಪೊಲೀಸರು ಯೋಚನೆಯನ್ನೇ ಮಾಡಿಲ್ಲ ಅಥವಾ ಮೆರವಣಿಗೆ ರಸ್ತೆ ದಾಟುವ ತನಕ ಸಂಚಾರ ಬಂದ್ ಮಾಡ ಬಹುದಿತ್ತು ಎಂದರು.



> **ಮೊಸಳೆಹೊಸಳ್ಳಿ ದುರಂತದಿಂದ ಮನಸ್ಸಿಗೆ ತುಂಬಾ ನೋವಾಗಿದೆ. ಮೃತ ವಿದ್ಯಾರ್ಥಿಗಳ ಕುಟುಂಬ ನೋಡಿದರೆ ಮರುಕವಾಗುತ್ತದೆ. ಪೋಷಕರ ಕಣ್ಣೀರು ಇನ್ನೂ ನಿಂತಿಲ್ಲ. ಕುಟುಂಬಕ್ಕೆ ಆಧಾರವಾಗಬೇಕಿದ್ದ ಮಕ್ಕಳು ಸಾವನ್ನಪ್ಪಿದ್ದಾರೆ. ಸರ್ಕಾರ ಸಂತ್ರಸ್ತರ ನೆರವಿಗೆ ಧಾವಿಸಬೇಕು.**
> **-ಹೆಚ್.ಡಿ.ರೇವಣ್ಣ, ಮಾಜಿ ಸಚಿವ.**

ಮೊಸಳೆಹೊಸಳ್ಳಿ ನಾಲ್ಕು ಸಾವಿರ ಜನಸಂಖ್ಯೆ ಇರುವ ಗ್ರಾಮ. ಗಣೇಶ ವಿಸರ್ಜನೆಗೆ ಸುತ್ತಲಿನ ಹಳ್ಳಿಗಳ ಜನರೂ ಬರುತ್ತಾರೆ. ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಇರುವುದರಿಂದ ಹಾಸ್ಟೆಲ್ ವಿದ್ಯಾರ್ಥಿಗಳು ಬರುತ್ತಾರೆಂಬ ತಿಳುವಳಿಕೆ ಪೊಲೀಸರಿಗೆ ಇರಬೇಕಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊದಲೇ ಸಭೆ ಮಾಡಿ ಸಿಬ್ಬಂದಿಗೆ ನಿಯಮ ಹೇಳಬೇಕಿತ್ತು ಎಂದು ಹೇಳಿದರು.

ಕಳೆದ ವರ್ಷ ಕಿತ್ತಾನೆ ಗಡಿ ಬಳಿ ಪ್ರೊಬೆಷನರಿ ಐಪಿಎಸ್ ಅಧಿಕಾರಿಯೊಬ್ಬರು ಅಪಘಾತದಲ್ಲಿ ಮೃತಪಟ್ಟರು. ರಾಷ್ಟ್ರೀಯ ಹೆದ್ದಾರಿಯ ಕಿತ್ತಾನೆ, ಮೊಸಳೆಹೊಸಳ್ಳಿ, ಹಳೇಕೋಟೆ ಬಳಿ ಬೈಪಾಸ್ ನಿರ್ಮಿಸಲು ನಮ್ಮ ಸರ್ಕಾರ ಇದ್ದಾಗ ಯೋಜನೆ ರೂಪಿಸಿದ್ದೆ. ಆದರೆ, ಯಾವುದು ಕಾರ್ಯರೂಪಕ್ಕೆ ಬರಲಿಲ್ಲವೆಂದರು.

**ಪೊಲೀಸರ ದಬ್ಬಾಳಿಕೆ**

ಘಟನೆ ನಡೆದ ಬಳಿಕ ತಾಳ್ಮೆ ಕಳೆದುಕೊಂಡ ಪೊಲೀಸರು ಅಮಾಯಕರ ಮೇಲೆ ಹಲ್ಲೆ ನಡೆಸಿದ್ದಾರೆ. ದುದ್ದ ಮಹಿಳಾ ಪಿಎಸ್‍ಐ ಅಮಾಯಕನ ಶರ್ಟ್ ಬಿಚ್ಚಿಸಿ ಹೊಡೆದಿದ್ದಾರೆ. ಅವರ ವಿರುದ್ಧ ಕ್ರಮ ಜರುಗಿಸುವಂತೆ ಪೊಲೀಸ್ ವರಿಷ್ಠಾಧಿಕಾರಿಗೆ ಹೇಳಿದ್ದೇನೆ. ವಾರದಲ್ಲಿ ಕ್ರಮವಾಗದಿದ್ದರೆ ಮುಂದೆ ಏನು ಮಾಡ ಬೇಕೆಂದು ನಮ್ಮ ಶಾಸಕರೊಟ್ಟಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳುತ್ತೇವೆಂದು ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಮದ್ಯದಂಗಡಿಗಳ ಸಂಖ್ಯೆ ಹೆಚ್ಚಿದೆ. ನಿಯಮ ಉಲ್ಲಂಘಿಸಿ ಪರವಾನಗಿ ನೀಡಿದ್ದಾರೆ. ಜಿಲ್ಲಾಧಿಕಾರಿ, ಅಬಕಾರಿ ಅಧಿಕಾರಿ ಹಾಗು ಸಚಿವರು ಈ ಸಮಸ್ಯೆಯತ್ತ ಗಮನ ಹರಿಸಬೇಕು. ನ್ಯಾಯಾಲಯ ಆದೇಶ ಧಿಕ್ಕರಿಸಿ ಬೇಕಾದ ಕಡೆ ಬಾರ್‌ಗಳಿಗೆ ಅನುಮತಿ ನೀಡಬಾರದೆಂದು ಒತ್ತಾಯಿಸಿದರು.

# ಚಿಕಿತ್ಸೆಗೆ ಹಣವಿಲ್ಲದೇ ಗಾಯಾಳುಗಳ ಪರದಾಟ

## ಮೊಸಳೆಹೊಸಳ್ಳಿ ಪ್ರಕರಣ: ಖಾಸಗಿ ಆಸ್ಪತ್ರೆಯಲ್ಲಿ ದಾಖಲಾದವರನ್ನು ಮರೆತ ಸರ್ಕಾರ

• ಪ್ರಜೋದಯ ವರದಿ

ಹಾಸನ: ಮೊಸಳೆಹೊಸಳ್ಳಿ ಭೀಕರ ಅಪಘಾತದಲ್ಲಿ ಗಾಯಗೊಂಡು ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿರುವ ಇಬ್ಬರು ಗಾಯಾಳುಗಳ ಚಿಕಿತ್ಸೆಗೆ ಹಣವಿಲ್ಲದೆ ಪರದಾಟ ನಡೆಸುತ್ತಿದ್ದಾರೆ.

ಈ ಮೊದಲು ಅಪಘಾತದಲ್ಲಿ ಗಾಯಗೊಂಡ ಎಲ್ಲರಿಗೂ ಉಚಿತವಾಗಿ ಚಿಕಿತ್ಸೆ ನೀಡುತ್ತೇವೆಂದು ಮಾತು ಕೊಟ್ಟಿದ್ದ ಸರ್ಕಾರ, ಮತ್ತೆ ಗಾಯಾಳುಗಳ ಯೋಗಕ್ಷೇಮ, ಆಸ್ಪತ್ರೆ ಚಿಕಿತ್ಸಾ ವೆಚ್ಚದ ಬಗ್ಗೆ ಚಕಾರ ಎತ್ತದೆ ಇರುವುದರಿಂದ ಖಾಸಗಿ ಆಸ್ಪತ್ರೆಯ ಶುಲ್ಕ ಭರಿಸಲು ಸಾಧ್ಯವಾಗದೆ, ಬೇರೆ ಆಸ್ಪತ್ರೆಗೆ ಕರೆದೊಯ್ಯಲಾಗದೆ ಪೋಷಕರು ಗೊಂದಲಕ್ಕೆ ಸಿಲುಕಿದ್ದಾರೆ.

ಮೊಸಳೆಹೊಸಳ್ಳಿ ಗ್ರಾಮದ ಆದರ್ಶ (25) ಹಾಗು ಮೊಸಳೆಹೊಸಳ್ಳಿ ಇಂಜಿನೀಯರಿಂಗ್ ಕಾಲೇಜು ಅಂತಿಮ ವರ್ಷದ ವಿದ್ಯಾರ್ಥಿ ರುತ್ವಿಕ್ (21) ಇಬ್ಬರನ್ನು ನಗರದ ಮಂಗಳಾ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಲಿಸಲಾಗುತ್ತಿದೆ. ಈಗಾಗಲೇ ಪೋಷಕರು ತಮ್ಮ ಕೈಯಲ್ಲಿದ್ದ 20 ರಿಂದ 30 ಸಾವಿರರೂ. ಹಣವನ್ನು ಪಾವತಿಸಿದ್ದಾರೆ. ಚಿಕಿತ್ಸಾ ವೆಚ್ಚ ಲಕ್ಷ ದಾಟಿರುವುದರಿಂದ ಕನಿಷ್ಠ ಅರ್ಧದಷ್ಟು ಆದರೂ ಪಾವತಿ ಮಾಡುವಂತೆ ಆಸ್ಪತ್ರೆ ಸಿಬ್ಬಂದಿ ಕೇಳುತ್ತಿರುವುದರಿಂದ ಏನು ಮಾಡಬೇಕೆಂದು ತೋಚದೆ ಅಸಹಾಯಕರಾಗಿದ್ದಾರೆ.

ಗಾಯಾಳುಗಳ ಚಿಕಿತ್ಸಾ ವೆಚ್ಚ ಪಾವತಿ ಮಾಡುವ ಸಂಬಂಧ ಸರ್ಕಾರ ಇದುವರೆಗೆ ಯಾವುದೇ ಕ್ರಮ ವಹಿಸದಿರುವುದರಿಂದ ಕಂಗಾಲಾಗಿರುವ ಪೋಷಕರು, ಸರ್ಕಾರ ನಡೆಗೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಆಸ್ಪತ್ರೆಗೆ ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಭೇಟಿ ನೀಡಿ ಯೋಗಕ್ಷೇಮ ವಿಚಾರಿಸಿದ್ದಾರೆಯೇ ವಿನಃ ಚಿಕಿತ್ಸಾ ವೆಚ್ಚದ ಬಗ್ಗೆ ಯಾರೊಬ್ಬರು ಮಾತನಾಡಿಲ್ಲ. ಖಾಸಗಿ ಆಸ್ಪತ್ರೆಯ ಸಿಬ್ಬಂದಿ ಗಾಯಾಳುಗಳ ಚಿಕಿತ್ಸಾ ವೆಚ್ಚವನ್ನು ಬ್ಯಾಲೆನ್ಸ್ ಶೀಟ್‌ನಲ್ಲಿ ಬರೆದಿಡುತ್ತಿದ್ದು, ಆಸ್ಪತ್ರೆ ಸಿಬ್ಬಂದಿ ಹಣ ಪಾವತಿಸುವಂತೆ ಕೇಳಿದ್ದರಿಂದ ಗಾಯಾಳುಗಳ ಸಂಬಂಧಿಕರು ದೂರವಾಣಿ ಮೂಲಕ ಜಿಲ್ಲಾಧಿಕಾರಿ ಅವರನ್ನು ಸಂಪರ್ಕಿಸಿದ ವೇಳೆ ಖಾಸಗಿ ಆಸ್ಪತ್ರೆಗೆ ಏಕೆ ದಾಖಲಿಸಿದ್ದೀರಿ ಎಂದು ಕೇಳಿದ್ದರಿಂದ ಮತ್ತಷ್ಟು ಆತಂಕಿತರಾಗಿದ್ದಾರೆ.



ಕೊಟ್ಟ ಮಾತಿನಂತೆ ಗಾಯಾಳುಗಳ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ನೀಡಬೇಕು. ನಾವು ಬಡವರಾಗಿದ್ದು, ಅಂದಿನ ಪರಿಸ್ಥಿತಿಯಲ್ಲಿ ಏನು ಮಾಡಬೇಕೆಂದು ತೋಚದೆ ಖಾಸಗಿ ಆಸ್ಪತ್ರೆಗೆ ತಂದು ದಾಖಲಿಸಿದ್ದೇವೆ. ಇಲ್ಲಿ ಉತ್ತಮ ಚಿಕಿತ್ಸೆ ಸಿಗುತ್ತಿದೆ. ಆದರೆ, ಶುಲ್ಕ ಪಾವತಿ ಮಾಡುವ ಶಕ್ತಿ ನಮ್ಮಲ್ಲಿಲ್ಲ. ಸರ್ಕಾರ ನಮ್ಮ ನೆರವಿಗೆ ಬರಬೇಕೆಂದು ಪೋಷಕರು ಮನವಿ ಮಾಡಿದ್ದಾರೆ.

### ಗಾಯಾಳು ಮೈಸೂರಿಗೆ ಸ್ಥಳಾಂತರ

ಹಾಸನ: ಗಣಪತಿ ಮೆರವಣಿಗೆ ವೇಳೆ ಮೊಸಳೆಹೊಸಳ್ಳಿ ಬಳಿ ಟ್ರಕ್ ಹರಿದು ಗಾಯಗೊಂಡು ನಗರದ ಹಿಮ್ಸ್ ಆಸ್ಪತ್ರೆಯ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ಆಕಾಶ್ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಸೋಮವಾರ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಮರಡಿಬಾಚಳ್ಳಿ ಗ್ರಾಮದ ಆಕಾಶ್ ಮೊಸಳೆಹೊಸಳ್ಳಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಯಾಗಿದ್ದ. ಅಪಘಾತದಲ್ಲಿ ಟ್ರಕ್ ಹರಿದು ಯಕೃತ್ತಿನಲ್ಲಿ ಊತ ಕಾಣಿಸಿಕೊಂಡಿತ್ತು. ಕಳೆದ ನಾಲ್ಕು ದಿನಗಳಿಂದ ನಗರದ ಹಿಮ್ಸ್ ಆಸ್ಪತ್ರೆಯಲ್ಲಿ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಆಕಾಶ್ ಆರೋಗ್ಯದಲ್ಲಿ ಚೇತರಿಕೆ ಕಾಣದ ಹಿನ್ನಲೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಸ್ಥಳಾಂತರಿಸುವಂತೆ ಆಕಾಶ್ ಅವರ ತಂದೆ-ತಾಯಿ ಕಣ್ಣೀರಿಟ್ಟಿದ್ದರು. ಪೋಷಕರ ಮನವಿಗೆ ಸ್ಪಂದಿಸಿದ ವೈದ್ಯರು, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದಾರೆ.

ಗಾಯಾಳುವಿನ ತಾಯಿ ಅರುಂಧತಿ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ಮಗನಿಗೆ ಯಕೃತ್‌ಗೆ ಪೆಟ್ಟು ಬಿದ್ದಿರುವುದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೇವೆ. ನಾವು ಕೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇವೆ. ಮಗನ ಚಿಕಿತ್ಸೆಗೆ ಸರ್ಕಾರ ನೆರವು ನೀಡಬೇಕೆಂದು ಮನವಿ ಮಾಡಿದರು.

# ಅಪಘಾತ ವಲಯಗಳಲ್ಲಿ ಸೂಚನಾ ಫಲಕ ಕಡ್ಡಾಯಗೊಳಿಸಿ

## ಕಾಲೇಜು ವಿದ್ಯಾರ್ಥಿಗಳ ಮೇಲೆ ನಿಗಾ ಇರಲಿ | ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸೂಚನೆ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಮೊಸಳೆಹೊಸಳ್ಳಿಯಲ್ಲಿ ಸಂಭವಿಸಿದ ಭೀಕರ ದುರಂತದ ಬಳಿಕ ಎಚ್ಚೆತ್ತುಕೊಂಡಿರುವ ಜಿಲ್ಲಾಡಳಿತ ರಸ್ತೆ ಅಪಘಾತ ತಡೆಗಟ್ಟುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮಕ್ಕೆ ಮುಂದಾಗಿದೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ರಸ್ತೆ ಸುರಕ್ಷತಾ ಸಮಿತಿ ಸಭೆ ನಡೆಸಿ, ಅಪಘಾತ ವಲಯಗಳನ್ನು ಗುರುತಿಸಿ ಸೂಚನಾ ಫಲಕ ಅಳವಡಿಸಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದ ಅವರು, ಅಪಘಾತಗಳಿಂದ ಸಾವು-ನೋವು ಸಂಭವಿಸುತ್ತಿವೆ. ಅದರ ಬಗ್ಗೆ ಯಾರಿಗೂ ಅರಿವಿಲ್ಲ, ಉದಾಸೀನದಿಂದ ವಾಹನ ಚಲಾಯಿಸಿ ಅವಘಡಗಳು ಸಂಭವಿಸುವುದರಿಂದ ಅಮಾಯಕ ಕುಟುಂಬಗಳು ನೋವು ಅನುಭವಿಸುವಂತಾಗಿದೆ ಎಂದರು.





ರಸ್ತೆ ಒತ್ತುವರಿ ತೆರವು, ಮುಖ್ಯ ರಸ್ತೆಗಳಲ್ಲಿ ಪಾದಾಚಾರಿಗಳ ಸಂಚಾರಕ್ಕೆ ಮೀಸಲಿರುವ ಸ್ಥಳದಲ್ಲಿ ಗೂಡಂಗಡಿಗೆ ಅವಕಾಶ ನೀಡಬಾರದು. ಈ ಬಗ್ಗೆ ಡಂಗೂರ ಸಾರಿಸಿ, ನೋಟೀಸ್ ನೀಡಿ, ಪತ್ರಿಕಾ ಪ್ರಕಟಣೆ ಮೂಲಕ ಜನರಲ್ಲಿ ಜಾಗೃತಿ ಮೂಡಿಸಬೇಕೆಂದರು.

ದ್ವಿಚಕ್ರ ವಾಹನ ಚಾಲಾಯಿಸುವವರು ಹೆಲ್ಮೆಟ್ ಕಡ್ಡಾಯವಾಗಿ ಧರಿಸಬೇಕು. ಯುವ ಜನತೆ ಬಹಳ ಲಘುವಾಗಿ ಪರಿಗಣಿಸಬಾರದು. ಅದರಿಂದ ಆಗುವ ಅವಘಡಗಳನ್ನು ತಡೆಯಲು ಅಧಿಕಾರಿಗಳು ಕ್ರಮವಹಿಸಬೇಕು. 18 ವರ್ಷದೊಳಗಿನ ಮಕ್ಕಳು ದ್ವಿಚಕ್ರ ವಾಹನ ಚಾಲನೆ ಮಾಡುವಂತಿಲ್ಲ. ಈ ನಿಟ್ಟಿನಲ್ಲಿ ಯಾವುದೇ ಪದವಿ ಪೂರ್ವ ಕಾಲೇಜುಗಳಿಗೆ ಮಕ್ಕಳು ದ್ವಿಚಕ್ರ ವಾಹನಗಳಲ್ಲಿ ಬರುತ್ತಿದ್ದರೆ ಅಂತಹ ಕಾಲೇಜುಗಳ ಪ್ರಾಂಶುಪಾಲರಿಗೆ ನೋಟೀಸ್ ನೀಡುವಂತೆ ತಿಳಿಸಿದರು.

ಶಾಲಾ ಕಾಲೇಜುಗಳಲ್ಲಿ ಮಾಹಿತಿಗಾಗಿ ರಸ್ತೆ ಸುರಕ್ಷತಾ ಚಿಹ್ನೆಗಳ ಫಲಕ ಅಳವಡಿಸಲು ಸೂಚಿಸಿದರಲ್ಲದೆ, ಸಂಚಾರ ನಿಯಮಗಳ ಕುರಿತು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಯಾವುದೇ ಅವಘಡ ಸಂಭವಿಸಿದ ನಂತರ ಕ್ರಮ ವಹಿಸುವುದಲ್ಲ, ಮುನ್ನೆಚ್ಚರಿಕೆ ವಹಿಸುವುದು ಎಲ್ಲರ ಜವಾಬ್ದಾರಿ. ಈ ನಿಟ್ಟಿನಲ್ಲಿ ತಾಲ್ಲೂಕು ಮಟ್ಟದಲ್ಲಿ ಸಭೆ ನಡೆಸಿ ಸಂಚಾರ ನಿಯಮ ಪಾಲನೆ ಮತ್ತು ರಸ್ತೆ

» ನಾಲ್ಕನೇ ಪುಟದಲ್ಲಿ

# ಜಿಲ್ಲಾ ಕ್ರೀಡಾಂಗಣದಲ್ಲಿ ವಿದ್ಯಾರ್ಥಿಗಳ ಬಡಿದಾಟ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ತಾಲ್ಲೂಕು ಮಟ್ಟದ ಪಿಯು ಕಾಲೇಜುಗಳ ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳ ನಡುವೆ ಬಡಿದಾಟ ನಡೆದಿದೆ.

ಖೋ-ಖೋ ಪಂದ್ಯಾವಳಿ ಮುಗಿದ ನಂತರ ಕ್ಷುಲ್ಲಕ ಕಾರಣಕ್ಕೆ ವಿದ್ಯಾರ್ಥಿಗಳು ಪರಸ್ಪರ ತಳ್ಳಾಟ ನಡೆಸಿದ ಪರಿಣಾಮ ಕ್ರೀಡಾಂಗಣದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಯಿತು. ಘಟನೆಯ ಹಿನ್ನಲೆಯಲ್ಲಿ ಕ್ರೀಡಾಂಗಣದ ವ್ಯವಸ್ಥೆ ಕುರಿತು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪ್ರತಿದಿನ ಇಲ್ಲಿ ಗಲಾಟೆಗಳಾಗುತ್ತಿವೆ. ಪುಂಡರು ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಂಗಣಕ್ಕೆ ಬರುತ್ತಿದ್ದಾರೆ. ವಯೋವೃದ್ಧರು ಬೆಳಗಿನ ವೇಳೆ ವಾಕ್ ಮಾಡಲು ಬರುವಾಗ ತೊಂದರೆ ಅನುಭವಿಸುತ್ತಿದ್ದಾರೆ. ಕೆಲವರು ವೇಗವಾಗಿ ಬೈಕ್ ಚಲಾಯಿಸಿಕೊಂಡು ಕ್ರೀಡಾಂಗಣಕ್ಕೆ ನುಗ್ಗುತ್ತಿದ್ದಾರೆಂದು ಸ್ಥಳೀಯರು ಕಳವಳ ವ್ಯಕ್ತಪಡಿಸಿದರು. ಆಯೋಜಕರ ನಿರ್ಲಕ್ಷ್ಯ, ಪೊಲೀಸರನ್ನು ನಿಯೋಜಿಸದಿರುವುದೇ ಗಲಾಟೆಗೆ ಕಾರಣ. ಈ ರೀತಿ ಗಲಾಟೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಕ್ರೀಡಾಕೂಟ ನಡೆಯುವ ಸಂದರ್ಭದಲ್ಲಾದರೂ ಗಸ್ತು ಪೊಲೀಸರ ನಿಯೋಜಿಸಬೇಕೆಂದು ಒತ್ತಾಯಿಸಿದ್ದಾರೆ.



# ಗಾಯಾಳು ಚಿಕಿತ್ಸಾ ವೆಚ್ಚ ಸರ್ಕಾರವೇ ಭರಿಸಲಿದೆ: ಶ್ರೇಯಸ್

## ಮೃತರ ಕುಟುಂಬಗಳಿಗೆ ವೈಯಕ್ತಿಕ 1 ಲ.ರೂ., ಗಾಯಾಳುಗಳಿಗೆ 25 ಸಾವಿರ ರೂ. ನೆರವು

• ಪ್ರಜೋದಯ ವರದಿ

**ಹಾಸನ:** ಮೊಸಳೆಹೊಸಳ್ಳಿ ದುರ್ಘಟನೆಯಲ್ಲಿ ಗಾಯಗೊಂಡು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದು ಸಂಸದ ಶ್ರೇಯಸ್ ತಿಳಿಸಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ಮಂಗಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ತಿಳಿಸಿದ್ದೇವೆ. ಶಸ್ತ್ರ ಚಿಕಿತ್ಸೆ ಸೇರಿ ಎಲ್ಲಾ ರೀತಿಯ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ನೀಡುತ್ತದೆ ಎಂದು ಸ್ಪಷ್ಟಪಡಿಸಿದರು.

ಸರ್ಕಾರ ನೀಡಿರುವ 5 ಲ.ರೂ. ಪರಿಹಾರ ಮೊತ್ತವನ್ನು ಪರಿಷ್ಕರಣೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದ್ದೇವೆ. ಅವರು ಯಾವ ತೀರ್ಮಾನ ತೆಗೆದುಕೊಳ್ಳುತ್ತಾರೋ ಕಾದು ನೋಡಬೇಕಿದೆ. ಮೃತರ ಕುಟುಂಬಕ್ಕೆ ನಾನು ವೈಯಕ್ತಿಕವಾಗಿ ತಲಾ 1 ಲ.ರೂ. ಹಾಗು ಗಾಯಾಳುಗಳಿಗೆ 25 ಸಾವಿರ ರೂ. ಪರಿಹಾರ ನೀಡಲಾಗುವುದು. ನಾನು ನೀಡಿದರೂ ಅದು ಪಕ್ಷವೇ ನೀಡಿದಂತೆ. ಇನ್ನು ಎರಡು ದಿನಗಳಲ್ಲಿ ಪರಿಹಾರ ತಲುಪಿಸುವ ಕೆಲಸ ಮಾಡುತ್ತೇವೆ.



ಅಪಘಾತ ನಡೆದ ಸ್ಥಳದಲ್ಲಿ ರಸ್ತೆ ಉಬ್ಬುಗಳನ್ನು ಈಗಾಗಲೇ ನಿರ್ಮಾಣ ಮಾಡಲಾಗಿದೆ. ಸೂಚನಾ ಫಲಕಗಳನ್ನು ಸಹ ಅಳವಡಿಕೆ ಮಾಡಲಾಗುವುದು. ಸ್ಥಳೀಯರು ಹಲವು ಸ್ಥಳಗಳಲ್ಲಿ ರಸ್ತೆ ಉಬ್ಬುಗಳನ್ನು ನಿರ್ಮಾಣ ಮಾಡುವಂತೆ ಕೇಳಿಕೊಂಡಿದ್ದಾರೆ. ಪರಿಶೀಲನೆ ನಡೆಸಿ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುತ್ತೇವೆ ಎಂದರು.

ಜಿಲ್ಲೆಯಲ್ಲಿ ಅಪಘಾತ ಸ್ಥಳಗಳನ್ನು ಗುರುತು ಮಾಡಿ ರಸ್ತೆ ವಿಸ್ತರಣೆ ಮಾಡಲು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಭೂಸ್ವಾಧೀನಕ್ಕೆ ಹಾಗು ಕಾಮಗಾರಿಗೆ ಅನುದಾನಕ್ಕಾಗಿ ಕೇಂದ್ರ ಭೂಸಾರಿಗೆ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಲಾಗುವುದೆಂದರು.

# ಸೆ.19ಕ್ಕೆ ಬಿಜಿಎಸ್ ವಾಕ್ ಫಾರ್ ಲೈಫ್ ಜಾಥಾ





• ಪ್ರಜೋದಯ ವರದಿ

**ಹಾಸನ:** ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಬಿ.ಜಿ.ನಗರದಲ್ಲಿ ಸೆ.19ರ ಶುಕ್ರವಾರ 25ನೇ ಯಶಸ್ವಿ ಕಿಡ್ನಿ ಕಸಿ ಶಸ್ತ್ರಚಿಕಿತ್ಸೆ ಹಾಗು ಅಂಗಾಂಗ ದಾನ ದಿನದ ಪ್ರಯುಕ್ತ ಜಾಗೃತಿ ಜಾಥಾ (ವಾಕ್ ಫಾರ್ ಲೈಫ್) ಹಮ್ಮಿಕೊಳ್ಳಲಾಗಿದೆ ಎಂದು ಆದಿಚುಂಚನಗಿರಿ ಆಸ್ಪತ್ರೆ ಸಾರ್ವಜನಿಕ ಸಂಪರ್ಕಾಧಿಕಾರಿ ಧರ್ಮೇಂದ್ರ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಅಂದು ಬೆಳಿಗ್ಗೆ 7 ಗಂಟೆಗೆ ಆದಿಚುಂಚನಗಿರಿ ಆಸ್ಪತ್ರೆಯ ಆದಿನಾಥ ರಸ್ತೆಯಿಂದ ಬಿಜಿಎಸ್ ಪ್ರತಿಮೆವರೆಗೆ 5 ಕಿ.ಮೀ. ಕಾಲ್ನಡಿಗೆ ಜಾಥಾ ನಡೆಯಲಿದೆ. ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಜಾಥಾಗೆ ಚಾಲನೆ ನೀಡುವರು. ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠಗಳ ಎಲ್ಲಾ ಮಠಾಧೀಶರು, ಸಿನಿಮಾ ಕ್ಷೇತ್ರದವರು, ಕ್ರೀಡಾಪಟುಗಳು, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಸಲೀಂ, ದಕ್ಷಿಣ ವಲಯ ಐಜಿಪಿ ಡಾ. ಬೋರಲಿಂಗಯ್ಯ, ನಟ ಧ್ರುವಸರ್ಜಾ, ಹಾಸನ, ಮಂಡ್ಯ, ತುಮಕೂರು ಜಿಲ್ಲೆಗಳ ಶಾಸಕರು, ಮಾಜಿ ಶಾಸಕರು ಭಾಗಿಯಾಗಲಿದ್ದಾರೆ. ಕಿಡ್ನಿ, ಲಿವರ್, ಲಂಗ್ಸ್ ಮೊದಲಾದ ಅಂಗಾಂಗ ದಾನ ಮಾಡಿದರೆ ಮತ್ತೊಬ್ಬರಿಗೆ ವರದಾನ ಆಗಲಿದೆ. ಶ್ರೀ ಕ್ಷೇತ್ರದ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 8 ಸಾವಿರ ವಿದ್ಯಾರ್ಥಿಗಳು ಸೇರಿ 15 ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆಂದರು.

ಬಿಜಿಎಸ್ ಕಾಲೇಜು ಪ್ರಾಂಶುಪಾಲ ಮೋಹನ್, ಪ್ರೌಢಶಾಲಾ ವಿಭಾಗದ ದರ್ಶನ್, ಹಾಸನ ಮಠದ ಮಾಧ್ಯಮ ವಕ್ತಾರ ಬಿ.ಆರ್.ಬೊಮ್ಮೇಗೌಡ, ಬಿಜಿಎಸ್ ಆಸ್ಪತ್ರೆ ಫಾರ್ಮಸಿಸ್ಟ್ ನಾಗರಾಜ್ ಇದ್ದರು.

**ಕಾಮಗಾರಿ ಗುಣಮಟ್ಟ ಲೆಕ್ಕಕ್ಕಿಲ್ಲ, ನಿರ್ವಹಣೆಯಂತೂ ಇಲ್ಲವೇ ಇಲ್ಲ | ಜಿಲ್ಲಾದ್ಯಂತ ಅಲ್ಪ-ಸ್ವಲ್ಪ ಕೆಲಸ, ಸಾರ್ವಜನಿಕರ ಆಕ್ರೋಶ**

# ಹಳ್ಳ ಹಿಡಿದ ಜೆಜೆಎಂ : ನೀರಿನಂತೆ ಖರ್ಚಾಗಿದೆ ಅನುದಾನ

• ಪ್ರಜೋದಯ ವರದಿ

**ಹಾಸನ:** ಜಲ ಜೀವನ್ ಮಿಷನ್ (ಜೆಜೆಎಂ) ಯೋಜನೆ ಜಿಲ್ಲೆಯಲ್ಲಿ ಹಳ್ಳ ಹಿಡಿಯುತ್ತಿದೆ. ಆದರೆ, ಬಿಡುಗಡೆಯಾದ ಕೋಟ್ಯಾಂತರ ರೂ. ಅನುದಾನ ನೀರಿನಂತೆ ಖರ್ಚಾಗುತ್ತಿದ್ದು, ಆ ಹಣ ಅಧಿಕಾರಿಗಳ ಮನೆ ಸೇರುತ್ತಿದೆಯೋ ಅಥವಾ ಗುತ್ತಿಗೆದಾರರ ಮನೆ ಸೇರುತ್ತಿದೆಯೋ ತಿಳಿಯದಂತಾಗಿದೆ.

ಜಿಲ್ಲಾದ್ಯಂತ ನಡೆಯುತ್ತಿರುವ ಕಾಮಗಾರಿಗಳು ಗುರಿ-ಸಾಧನೆಗೆ ಅಷ್ಟೇ ಸಿಮೀತವಾಗಿದೆ. ಕಾಮಗಾರಿಗಳ ಗುಣಮಟ್ಟ ಲೆಕ್ಕಕ್ಕಿಲ್ಲ, ನಿರ್ವಹಣೆಯಂತೂ ಇಲ್ಲವೇ ಇಲ್ಲ, ಅರ್ಧಬಂರ್ಧ ಕೆಲಸ ನಡೆದಿದೆ. ಗ್ರಾಮಗಳಿಗೆ ನೀರಿನ ಸಂಪರ್ಕ ಕಲ್ಪಿಸಲು ಮೀನಾ-ಮೇಷ ಎಣಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳಬೇಕಿರುವ 2,494 ಕಾಮಗಾರಿಗಳಲ್ಲಿ ಇದುವರೆಗಿನ ಸಾಧನೆ ಅಂದಾಜು 450 ಮಾತ್ರ ಎಂಬುದು ಅಚ್ಚರಿಯ ಸಂಗತಿ.

**ಕೋಟಿ-ಕೋಟಿ ಹಣ ವೆಚ್ಚ**

ಜಿಲ್ಲೆಯಲ್ಲಿ ಜೆಜೆಎಂ ಮಾತ್ರವಲ್ಲದೇ ಬಹುಗ್ರಾಮ ಕುಡಿಯುವ ನೀರಿನ ಯೋಜನೆ (ಎಂವಿಎಸ್) ಕಾಮಗಾರಿಗಳು ಕೂಡ ಕುಂಟುತ್ತ ಸಾಗಿವೆ. ಜೆಜೆಎಂ, ಎಂವಿಎಸ್ ಸೇರಿ ಎರಡು ಯೋಜನೆಗಳಿಂದ 2025 ಮಾರ್ಚ್ ಅಂತ್ಯಕ್ಕೆ ಜಿಲ್ಲೆಯಲ್ಲಿ ಒಟ್ಟು 2,494 ಕಾಮಗಾರಿಗಳ ವಾರ್ಷಿಕ ಗುರಿ ನೀಡಲಾಗಿದೆ. ಅದರಲ್ಲಿ ಜೆಜೆಎಂ 1,998 ಕಾಮಗಾರಿಗಳಿವೆ. ಜೆಜೆಎಂ ಕಾಮಗಾರಿಗಾಗಿ ಒಟ್ಟು 49,407 ಲ.ರೂ. ಅನುದಾನ ಬಿಡುಗಡೆಯಾಗಿದ್ದು, 49,394 ಲ.ರೂ. ಖರ್ಚು ಮಾಡಲಾಗಿದೆ. ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ವಾರ್ಷಿಕ 1,21,152 ಲ.ರೂ. ವಾರ್ಷಿಕ ಅನುದಾನ ಹಂಚಿಕೆಯಾಗಿದೆ. ಅದರಲ್ಲಿ 49,365 ಲ.ರೂ. ಅನುದಾನ ಬಿಡುಗಡೆಯಾಗಿ, ಅಷ್ಟೂ ಹಣವನ್ನು ಖರ್ಚು ಮಾಡಲಾಗಿದೆ. ಜೆಜೆಎಂ ಮತ್ತು ಎಂವಿಎಸ್ ಎರಡು ಯೋಜನೆಗಳಿಂದ ಜಿಲ್ಲೆಗೆ ಒಟ್ಟು 98,772 ಲ.ರೂ. ಹಣ ಬಿಡುಗಡೆಯಾಗಿದ್ದು, 98,760 ಲಕ್ಷರೂ. ಹಣವನ್ನು ಖರ್ಚು ಮಾಡಲಾಗಿದೆ. ಇಷ್ಟು ಪ್ರಮಾಣದ ಅನುದಾನ ಬಿಡುಗಡೆಯಾಗಿ, ಅಷ್ಟೂ ಹಣ ವನ್ನು ಖರ್ಚು ಮಾಡಿದರೂ ಜಿಲ್ಲೆಯ ಯಾವ ಭಾಗದಲ್ಲೂ ಸಮರ್ಪಕ ಕಾಮಗಾರಿ ನಡೆದಿಲ್ಲ. ಕೆಲವೇ ಕೆಲವು ಕಾಮಗಾರಿಗಳು ಮಾತ್ರ ಪೂರ್ಣಗೊಂಡಿವೆ.



**ಅಧಿಕಾರಿಗಳ ನಿರ್ಲಕ್ಷ್ಯ**

ಮನೆ ಮನೆಗೆ ನಲ್ಲಿ ಮೂಲಕ ಶುದ್ಧ ಕುಡಿಯುವ ನೀರು ಒದಗಿಸುವ ಮಹತ್ವಾಕಾಂಕ್ಷಿ ಯೋಜನೆ ವಿಚಾರದಲ್ಲಿ ಜಿಲ್ಲಾ ಪಂಚಾಯಿತಿ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆ ಎದ್ದು ಕಾಣುತ್ತಿದೆ. ಕೆಲವು ಕಡೆಗಳಲ್ಲಿ ಪೈಪ್‌ಲೈನ್ ಕಾಮಗಾರಿ ಮುಗಿದು ಆರೇಳು ತಿಂಗಳಾಗಿದ್ದರೂ ಸಂಪರ್ಕ ಕಲ್ಪಿಸಿಲ್ಲ. ಪೈಪ್‌ಲೈನ್ ಕೆಲಸಕ್ಕೆ ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಎಷ್ಟೋ ಕಡೆಗಳಲ್ಲಿ ನಲ್ಲಿಯನ್ನೂ ಅಳವಡಿಸಿಲ್ಲ. ಈ ಹಿಂದೆಯೇ ಸರಿಯಾಗಿ ನೀರು ಸಿಗುತ್ತಿತ್ತು. ಜಲ ಜೀವನ್ ಮಿಷನ್‌ನಿಂದ ಸುಸೂತ್ರ ನೀರು ಸಿಗುತ್ತಿಲ್ಲವೆಂದು ಸಹ ಸಾರ್ವಜನಿಕ ವಲಯದಲ್ಲಿ ಯೋಜನೆ ಅನುಷ್ಠಾನದ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತವಾಗುತ್ತಿದೆ.

(2024-25ನೇ ಸಾಲಿನ ಮಾರ್ಚ್ ಅಂತ್ಯದ ಅನುದಾನದ ವಿವರ ಲ.ರೂ.ಗಳಲ್ಲಿ)

| ಯೋಜನೆ ಹೆಸರು | ವಾರ್ಷಿಕ ಗುರಿ | ವಾರ್ಷಿಕ ಅನುದಾನ ಹಂಚಿಕೆ | ಬಿಡುಗಡೆಯಾದ ಅನುದಾನ | ಖರ್ಚಾದ ಅನುದಾನ |
|---|---|---|---|---|
| ಜೆಜೆಎಂ ಬ್ಯಾಚ್-1(2020-21) | 27 | 15,338 | 1942 | 1942 |
| ಜೆಜೆಎಂ ಬ್ಯಾಚ್-2(2021-22) | 111 | 15,407 | 3024 | 3024 |
| ಜೆಜೆಎಂ ಬ್ಯಾಚ್-3(2022-23) | 66 | 1147 | 495 | 495 |
| ಜೆಜೆಎಂ ಬ್ಯಾಚ್-4(2022-23) | 1,794 | 98,015 | 43,945 | 43,932 |
| ಒಟ್ಟು 1 ರಿಂದ 4 | 1,998 | 1,29,909 | 49,407 | 49,394 |

**ರೂಪುರೇಷೆಯೇ ಸಿದ್ಧವಾಗಿಲ್ಲ**

ಓವರ್ ಹೆಡ್ ಟ್ಯಾಂಕ್‌ಗಳ ಗುಣಮಟ್ಟ ಸಂಪೂರ್ಣ ಕಳಪೆಯಾಗಿದೆ. ನಾನಾ ಕಡೆಗಳಲ್ಲಿ ಚರಂಡಿಯಲ್ಲೇ ಪೈಪ್‌ಲೈನ್ ಅಳವಡಿಸಿದ್ದಾರೆ. ಕೋಟ್ಯಾಂತರ ರೂ. ಖರ್ಚು ಮಾಡಿ ಮಾಡಿರುವ ಕಾಂಕ್ರೀಟ್ ರಸ್ತೆಗಳನ್ನು ಹಾಳು ಮಾಡಿ ಹದಗೆಡಿಸಲಾಗಿದೆ. ಬಾಕಿ ಕಾಮಗಾರಿಗಳಿಗೆ ಯೋಜನೆ ರೂಪುರೇಷೆ ಸಿದ್ಧವಾಗಿಲ್ಲ. ಒಂದೇ ಒಂದು ಕಡೆಯೂ ಸುಸೂತ್ರ ನೀರು ನೀಡಿಲ್ಲ ಎನ್ನುತ್ತಾರೆ ಜನರು.

ಜಿಲ್ಲೆಯಲ್ಲಿ ಜೆಜೆಎಂ ಯೋಜನೆ ಅನುಷ್ಠಾನ ಆಗಬೇಕಿರುವ 2494 ಕಾಮಗಾರಿಗಳ ಪೈಕಿ 450 ಕಾಮಗಾರಿಗಳು ಪೂರ್ಣಗೊಂಡಿವೆ. ಹೀಗಾಗಿ ಸಾವಿರಾರು ಕೆಲಸಗಳು ಅರ್ಧಕ್ಕೆ ನಿಂತಿವೆ. ಕೆಲವೆಡೆ ಬೇಕಾಬಿಟ್ಟಿ ಕೆಲಸ ನಡೆಸಿರುವುದರಿಂದ ನಲ್ಲಿಗಳು ಕಿತ್ತು ಬಂದಿವೆ. ಕಳಪೆ ಕಾಮಗಾರಿಯಿಂದ ಹಲವು ಗ್ರಾಮಗಳಲ್ಲಿ ನಿತ್ಯವೂ ನೀರು ವ್ಯರ್ಥವಾಗಿ ಹರಿಯುತ್ತಿದೆ.

## ದುಡಿಮೆಯ ಮಹತ್ವ

ಒಂದು ಊರಿನಲ್ಲಿ ಗೋವಿಂದನೆಂಬ ರೈತನಿದ್ದ. ಆತನ ಹೆಂಡತಿ ಸುಬ್ಬಿ. ಇವರಿಬ್ಬರಿಗೂ ಮೂವರು ಮಕ್ಕಳಿದ್ದರು. ಆದರೆ ಇಬ್ಬರು ಮಕ್ಕಳು. ಕಾಯಿಲೆ ಬಂದು ತೀರಿಕೊಂಡಿದ್ದರು. ಮೂರನೆಯವ ವೀರೇಶ. ತಮ್ಮ ಕರುಳ ಕುಡಿಯಾಗಿ ಉಳಿದುಕೊಂಡ ಒಬ್ಬನೇ ಮಗನನ್ನು ಗೋವಿಂದ ಮತ್ತು ಸುಬ್ಬಿ ತುಂಬಾ ಮುದ್ದಿನಿಂದ ಸಾಕಿದ್ದರು.

ವೀರೇಶನೋ ತುಂಬಾ ಉಡಾಳ ಬುದ್ಧಿಯವನಾಗಿದ್ದ. ಸಿಕ್ಕಿದ್ದೆಲ್ಲ ಬೇಕು. ಹಟದ ಸ್ವಭಾವ. ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು ಎನ್ನುವ ಆಲೋಚನೆಯನ್ನೂ ಮಾಡದೆ ದುಡುಕಿ ಏನಾದರೊಂದು ಅವಗಡ ಮಾಡಿಬಿಡುತ್ತಿದ್ದ. ಗೋವಿಂದ ವೀರೇಶನನ್ನು ಶಾಲೆಗೆ ಸೇರಿಸಿದ್ದರೂ ಅಲ್ಲಿಂದಲೂ ಏನಾದರೂ ದೂರು ಬಂದೇ ಬರುತ್ತಿತ್ತು. ಬೈದು ಬುದ್ಧಿ ಹೇಳಿದರೆ ಮಗ ಕೋಪ ಮಾಡಿಕೊಳ್ಳುತ್ತಾನೆ, ಬೇಸರ ವ್ಯಕ್ತಪಡಿಸುತ್ತಾನೆ. ಇದ್ದೊಬ್ಬ ಮಗ ನಾಳೆ ಏನಾದರೂ ಜೀವಕ್ಕೆ ಅಪಾಯ ತಂದುಕೊಂಡರೆ ಎಂಬ ಭಯ. ಗೋವಿಂದ ಮತ್ತು ಸುಬ್ಬಿಗೆ ಏನು ಮಾಡಬೇಕೆಂಬುದೇ ತೋಚುತ್ತಿರಲಿಲ್ಲ.

ಒಮ್ಮೆ ಏನಾಯಿತೆಂದರೆ ಗೋವಿಂದ ತನ್ನ ತೋಟದಲ್ಲಿ ಒಂದಿಷ್ಟು ಬಾಳೆ ಸಸಿಗಳನ್ನು ನೆಟ್ಟು ಬಂದಿದ್ದ. ಅವುಗಳಿಗೆಲ್ಲ ಚೆನ್ನಾಗಿ ನೀರು ಗೊಬ್ಬರ ಹಾಕಿ ಆರೈಕೆ ಮಾಡಿದ್ದ ಕೂಡ. ಕಷ್ಟ ಪಟ್ಟು ಬೆವರು ಸುರಿಸಿ ನೆಟ್ಟಿದ್ದು ಫಲ ಬಂದ ಮೇಲೆ ಅದನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಮನೆ ಖರ್ಚನ್ನು ನಿಭಾಯಿಸುವುದಕ್ಕೆ ಅನುಕೂಲವಾಗುತ್ತದೆ ಎಂಬುದು ಅವನ ಆಲೋಚನೆ. ಕೆಲವೇ ದಿವಸಗಳಲ್ಲಿ ಸಸಿಗಳೆಲ್ಲ ಸೊಂಪಾಗಿ ಬೆಳೆದು ಸುಂದರ ಗೊಂಬೆಗಳಂತೆ ಕಾಣುತ್ತಿದ್ದವು ಗೋವಿಂದನಿಗೆ ಖುಷಿಯಾಗಿತ್ತು.

ಒಂದು ದಿನ ತೋಟದಿಂದ ಬಂದ ಗೋವಿಂದ ಕೈಯಲ್ಲಿದ್ದ ಕತ್ತಿಯನ್ನು ಮನೆಯ ಜಗುಲಿಯ ಒಂದು ಮೂಲೆಯಲ್ಲಿ ಇಟ್ಟಿದ್ದ. ಇದನ್ನು ನೋಡಿದ ವೀರೇಶ ಆ ಕತ್ತಿಯನ್ನು ತೆಗೆದುಕೊಂಡು ಸಿಕ್ಕಿದ್ದೆಲ್ಲ ಕಡಿಯುತ್ತ ತೋಟದ ಕಡೆ ಬಂದ. ಅವನಿಗೆ ಕಡಿದಾಗ ಬರುವ ಕಚಕ್ ಕಚಕ್ ಸದ್ದು ಒಂದು ರೀತಿಯ ಮಜಾ ಕೊಟ್ಟಿತು. ಉತ್ಸಾಹದಿಂದ ಅಲ್ಲಿದ್ದ ಗಿಡಗಳನ್ನೆಲ್ಲ ಕಡಿಯುತ್ತಾ ಹೋದ. ಹಸಿರಿನಿಂದ ಕಂಗೊಳಿಸುತ್ತಿದ್ದ ತೋಟ ಬಯಲಾಗಿಬಿಟ್ಟಿತು. ವೀರೇಶನೋ ತಾನೇನೋ ದೊಡ್ಡ ಸಾಧನೆ ಮಾಡಿ ಬಂದವನಂತೆ ತಂದೆಯ ಬಳಿ ಬಂದು ತಾನು ಗಿಡಗಳನ್ನು ಕಡಿದ ವಿಚಾರವನ್ನು ಖುಷಿಯಿಂದ ಹೇಳಿಕೊಂಡ.

ಗೋವಿಂದನಿಗೆ ಅನುಮಾನ ಬಂತು. ಆತ ತೋಟಕ್ಕೆ ಹೋಗಿ ನೋಡಿದರೆ ಬಂಗಾರದಂತಹ ಬಾಳೆ ಸಸಿಗಳೆಲ್ಲ ನೆಲಸಮವಾಗಿದ್ದವು. ತಾನು ಅಷ್ಟೆಲ್ಲಾ ಕಷ್ಟಪಟ್ಟು ನೆಟ್ಟಿದ್ದನ್ನೆಲ್ಲ ಒಂದೇ ನಿಮಿಷದಲ್ಲಿ ಹಾಳು ಮಾಡಿದ ಮಗನ ಮೇಲೆ ತುಂಬಾ ಸಿಟ್ಟು ಬಂತು. ಆದರೆ ಗೋವಿಂದ ದುಡುಕಲಿಲ್ಲ. ತಾಳ್ಮೆ ವಹಿಸಿದ. ಹೇಗಾದರೂ ಮಾಡಿ ಮಗನಿಗೆ ಬುದ್ಧಿ ಕಲಿಸಬೇಕು ಇಲ್ಲದಿದ್ದಲ್ಲಿ ಅವನ ಭವಿಷ್ಯಕ್ಕೆ ತೊಂದರೆ ಎನಿಸಿತು. ಆತ ಮಗನನ್ನು ಕರೆದುಕೊಂಡು ಹೋಗಿ ಒಂದಿಷ್ಟು ಬಾಳೆ ಸಸಿಗಳನ್ನು ತಂದು ತೋಟಕ್ಕೆ ಹೋಗಿ ಮಗನ ಹತ್ತಿರವೇ ಗುಣಿ ಹೊಡೆಸಿ ಸಸಿಗಳನ್ನು ನೆಡಿಸಿದ. ವೀರೇಶನಿಗೆ ಈಗ ಅರ್ಥವಾಯಿತು. ಅವನಿಗೂ ಕೆಲಸ ಮಾಡಿ ಮಾಡಿ ಮೈಯಿಂದ ಬೆವರು ಸೋರುತ್ತಿತ್ತು. ಆತ ಸೋತು ಸುಸ್ತುಬಡಿದ.

ಅಯ್ಯೋ ನಾನೆಂಥ ಕೆಲಸ ಮಾಡಿದೆ ಎಂದು ಮರುಗಿದ. ಬಾಳೆ ಸಸಿಗಳನ್ನು ನೆಡಲು ಅಪ್ಪ ಎಷ್ಟು ಕಷ್ಟಪಟ್ಟಿದ್ದಾರೆ ಅದನ್ನು ನಾನು ಒಂದು ನಿಮಿಷದಲ್ಲಿ ಹಾಳುಗೆಡವಿಬಿಟ್ಟೆ ಎಂದು ಪಶ್ಚಾತ್ತಾಪ ಪಟ್ಟ. ಕೂಡಲೇ ಅಪ್ಪನ ಬಳಿ ಹೋಗಿ ಕ್ಷಮೆ ಕೇಳಿದ. ಆಗ ಗೋವಿಂದ ಹೇಳಿದ ಮಗನೇ ನೀನು ಸಸಿಗಳನ್ನು ಕಡಿದ ಕೂಡಲೇ ನಿನಗೆ ಬೈದಿದ್ದರೆ ಒಮ್ಮೆ ಬೇಸರ ಮಾಡಿಕೊಂಡು ಸುಮ್ಮನಿದ್ದು ಬಿಡುತ್ತಿದ್ದೆ ಮತ್ತೆ ಇನ್ನೊಂದು ದಿನ ಇಂತಹ ಇನ್ನೊಂದು ತಪ್ಪು ಮಾಡುತ್ತಿದ್ದೆ. ನಿನಗೆ ದುಡಿಮೆಯ ಮಹತ್ವ ತಿಳಿಯುತ್ತಿರಲಿಲ್ಲ ನಿನ್ನ ತಪ್ಪು ನಿನಗೆ ಗೊತ್ತಾಗುತ್ತಿರಲಿಲ್ಲ. ಅಲ್ಲದೇ ನೀನು ಯಾವಾಗಲೂ ದುಡುಕಿ ನಿರ್ಧಾರ ತೆಗೆದುಕೊಳ್ಳಬಾರದು. ನಿನ್ನಲ್ಲಿ ತಾಳ್ಮೆ ಬರಬೇಕು. ಇವೆಲ್ಲದರ ಅರಿವು ನಿನಗಾಗಲೆಂದು ನೀನು ಹಾಳು ಮಾಡಿದ್ದನ್ನು ನಿನ್ನ ಬಳಿಯೇ ಮಾಡಿಸಿದೆ ಎಂದನು. ಅಪ್ಪನ ಮಾತಿನಿಂದ ವೀರೇಶನಿಗೆ ಸಂತೋಷವಾಯಿತು. ಅಂದಿನಿಂದ ಅವನು ತನ್ನ ಸ್ವಭಾವವನ್ನು ಬದಲಾಯಿಸಿಕೊಂಡು ಒಳ್ಳೆಯ ವ್ಯಕ್ತಿಯಾಗಿ ಬೆಳೆದನು.



## 16-9-2025 ದಿನ ಭವಿಷ್ಯ



**ಮೇಷ:** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ನಿಮ್ಮ ಹೂಡಿಕೆಗಳು ಬಗ್ಗೆ ನಿಮ್ಮ ಭವಿಷ್ಯದ ಗುರಿಗಳ ಬಗ್ಗೆ ರಹಸ್ಯಮಯವಾಗಿರಿ. ದಿನದ ಕೊನೆಯಲ್ಲಿ ಒಬ್ಬ ಹಳೆಯ ಸ್ನೇಹಿತರ ಭೇಟಿ ನಿಮ್ಮ ಸಂಜೆಯನ್ನು ಬೆಳಗಿಸುತ್ತದೆ. ನಿಮ್ಮ ಬಾಲ್ಯದ ಸವಿನೆನಪುಗಳನ್ನೂ ಆನಂದಿಸುತ್ತೀರಿ.



**ವೃಷಭ:** ನೀವು ಅಭಿಪ್ರಾಯ ನೀಡುವಾಗ ಇತರರ ಭಾವನೆಗಳನ್ನು ವಿಶೇಷವಾಗಿ ಪರಿಗಣಿಸಿ. ನೀವು ಮಾಡಿದ ಯಾವುದೇ ತಪ್ಪು ನಿರ್ಧಾರ ಅವರಿಗೆ ಮಾತ್ರ ವ್ಯತಿರಿಕ್ತ ಪರಿಣಾಮ ಉಂಟುಮಾಡದೇ ನಿಮಗೂ ಮಾನಸಿಕ ಒತ್ತಡ ನೀಡುತ್ತದೆ. ಇಂದು ನೀವು ಹಣಕ್ಕೆ ಸಂಬಂಧಿಸಿದ ಸಮಸ್ಯೆಯ ಕಾರಣದಿಂದ ತೊಂದರೆಗೊಳಗಾಗಬಹುದು.




**ಮಿಥುನ:** ಸಾಮಾಜಿಕ ಜೀವನಕ್ಕಿಂತ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಡೈರಿ ಉದ್ಯಮಕ್ಕೆ ಸೇರಿರುವವರು ಇಂದು ಆರ್ಥಿಕ ಲಾಭವನ್ನು ಪಡೆಯುವ ಪ್ರಬಲ ಸಾಧ್ಯತೆ ಇದೆ. ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನಿಮ್ಮ ಸಹಾಯ ಕೇಳುವ ಒಬ್ಬ ವಯಸ್ಸಾದ ಹಿರಿಯರಿಂದ ಆಶೀರ್ವಾದ. ಇಂದು ನೀವು ನಿಮ್ಮ ಸ್ನೇಹಿತನ ಅನುಪಸ್ಥಿತಿಯಲ್ಲಿ ಅವರ ಸುಗಂಧವನ್ನು ಅನುಭವಿಸುತ್ತೀರಿ.



**ಕರ್ಕಾಟಕ:** ಅನಂತ ಚೈತನ್ಯ ಮತ್ತು ಉತ್ಸಾಹ ನಿಮ್ಮನ್ನು ಆವರಿಸುತ್ತದೆ ಮತ್ತು ನೀವು ಯಾವುದೇ ಅವಕಾಶವನ್ನು ನಿಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತೀರಿ. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ. ನಿಮ್ಮ ಜ್ಞಾನದಾಹ ನಿಮಗೆ ಹೊಸ ಸ್ನೇಹಿತರನ್ನು ಪಡೆಯಲು ಸಹಾಯ ಮಾಡುತ್ತದೆ.



**ಸಿಂಹ:** ಜನರನ್ನು ನಿಮ್ಮಿಷ್ಟದಂತೆ ನಡೆದುಕೊಳ್ಳುವಂತೆ ಒತ್ತಾಯಿಸಬೇಡಿ. ಇತರರ ಬಯಕೆ ಮತ್ತು ಆಸಕ್ತಿಯ ಬಗ್ಗೆ ಯೋಚಿಸಿದಲ್ಲಿ ನಿಮಗೆ ಅನಿಯಮಿತ ಸಂತೋಷ ಬರುತ್ತದೆ. ಭವಿಷ್ಯದಲ್ಲಿ ನೀವು ಆರ್ಥಿಕವಾಗಿ ಬಲವಾಗಿರಬೇಕೆಂದು ಬಯಸಿದರೆ ಇಂದಿನಿಂದಲೇ ಹಣವನ್ನು ಉಳಿಸಿ. ನಿಮ್ಮ ಸಹೋದರನಿಗೆ ವಿಷಯಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಸಹಾಯ ಮಾಡಿ.



ಕನ್ಯಾ: ಇಂದು ಆರೋಗ್ಯ ಪರಿಪೂರ್ಣವಾಗಿರುತ್ತದೆ. ನೀವು ಸಂಪ್ರದಾಯಬದ್ಧ ಹೂಡಿಕೆಗಳನ್ನು ಮಾಡಿದಲ್ಲಿ ಒಳ್ಳೆಯ ಹಣ ಮಾಡುತ್ತೀರಿ. ಯುವಕರನ್ನು ಹೊಂದಿರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಒಳ್ಳೆಯ ಸಮಯ. ನಿಮ್ಮ ಸಂಗಾತಿಯ ಪ್ರೀತಿ ನಿಜವಾಗಿಯೂ ಭಾವಪೂರ್ಣವಾಗಿದೆ ಎಂದು ಇಂದು ನೀವು ತಿಳಿದುಕೊಳ್ಳುತ್ತೀರಿ.



ತುಲಾ: ನೀವು ಮನಸ್ಸಿನ ಸಮಸ್ಯೆಗಳನ್ನು ಬಗೆಹರಿಸಲು ನಿಮ್ಮ ಬುದ್ಧಿವಂತಿಕೆ, ಜಾಣತನ ಮತ್ತು ಸಭ್ಯತೆಯನ್ನು ಬಳಸಬೇಕಾಗುತ್ತದೆ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು ಮತ್ತು ನೀವು ಹಣದಿಂದ ಲಾಭ ಪಡೆಯಬಹುದು.



**ವೃಶ್ಚಿಕ:** ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ ಏಕೆಂದರೆ ನಿಮ್ಮ ಮೂಲಕ ಕೊಟ್ಟಿರುವ ಹಣ ಇಂದು ನಿಮಗೆ ಮರಳಿ ಸಿಗಬಹುದು. ನೀವು ಎಲ್ಲರ ಬೇಡಿಕೆಗಳನ್ನೂ ಪೂರೈಸಲು ಪ್ರಯತ್ನಿಸಿದಲ್ಲಿ ವಿವಿಧ ದಿಕ್ಕುಗಳಲ್ಲಿ ಹರಿದು ಹೋಗುತ್ತೀರಿ.



**ಧನು:** ದ್ವೇಷ ಪ್ರೀತಿಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದು ನಿಮ್ಮ ದೇಹದ ಮೇಲೆ ಪ್ರಾಣಾಂತಿಕ ಪರಿಣಾಮ ಬೀರುವದರಿಂದ ನಿಮ್ಮ ದ್ವೇಷವನ್ನು ಸಾಯಿಸಲು ಒಂದು ಸಮರಸದ ಸ್ವಭಾವವನ್ನು ರೂಪಿಸಿಕೊಳ್ಳಿ. ದುಷ್ಟತೆಯು ಒಳಿತಿಗಿಂತ ಬೇಗ ವಿಜಯ ಸಾಧಿಸುತ್ತದೆಂದು ನೆನಪಿಡಿ. ನಿಮ್ಮ ತಂದೆಯ ಯಾವುದೇ ಸಲಹೆ ಇಂದು ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ.



**ಮಕರ:** ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ, ನೀವು ಇದನ್ನು ಮಾಡದಿದ್ದರೆ ಸರಕುಗಳು ಕದಿಯುವ ಸಾಧ್ಯತೆಯಿದೆ. ಕೌಟುಂಬಿಕ ಜವಾಬ್ದಾರಿಗಳು ಹೆಚ್ಚಾಗುತ್ತವೆ ಇವು ನಿಮ್ಮ ಮನಸ್ಸಿನ ಮೇಲೆ ಒತ್ತಡ ತರುತ್ತವೆ.




**ಕುಂಭ:** ನಿಮಗೇನು ಒಳ್ಳೆಯದೆಂದು ನಿಮಗೆ ಮಾತ್ರ ಗೊತ್ತು – ಆದ್ದರಿಂದ ಧೃಢವಾಗಿರಿ ಮತ್ತು ಧೈರ್ಯಶಾಲಿಗಳಾಗಿರಿ ಮತ್ತು ತಕ್ಷಣದ ನಿರ್ಧಾರಗಳನ್ನು ತೆಗೆದುಕೊಳ್ಳಿ ಹಾಗೂ ಫಲಿತಾಂಶಗಳಿಗೆ ಸಿದ್ದವಾಗಿರಿ. ಇಂದು ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು ಮತ್ತು ನಿಮ್ಮ ಸಾಕಷ್ಟು ಹಣವು ಖರ್ಚಾಗಬಹುದು



**ಮೀನ:** ನಿಮ್ಮ ಹಾಸ್ಯಪ್ರಜ್ಞೆ ಇನ್ನೊಬ್ಬರಿಗೆ ಸಂತೋಷ ವಸ್ತುಗಳನ್ನು ಹೊಂದುವುದರಲ್ಲದೇ ನಮ್ಮೊಳಗೇ ಇದೆಯೆಂದು ಅರ್ಥ ಮಾಡಿಸುವುದರಿಂದ ಅವರು ಸ್ವತಃ ಈ ಕೌಶಲ್ಯವನ್ನು ಹೊಂದಲು ಪ್ರೋತ್ಸಾಹಿಸಿದಂತಾಗುತ್ತದೆ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು

# ದಯಾಮಯಿ ದೇವರೇ, ಈ ದೇಶಕ್ಕೆ ದಯಮಾಡಿ ಆನೆ ಕೊಡು...



ಲಾವೋಸ್ ಇಂದಿಗೂ ತನ್ನ ಸಂಪ್ರದಾಯ ಉಳಿಸಿಕೊಂಡ ನಾಡು. ಆ ಕಾರಣದಿಂದ ಆನೆಗಳು ಹೆಚ್ಚು ಮಹತ್ವ ಪಡೆಯುತ್ತವೆ. ಭಾರತದಲ್ಲಿ ಗೋವಿಗೆ ಇರುವ ಸ್ಥಾನ ಅಲ್ಲಿ ಆನೆಗಿದೆ. ಆ ದೇಶದಲ್ಲಿ 2-3 ರಾಷ್ಟ್ರೀಯ ಹೆದ್ದಾರಿಯನ್ನು ಬಿಟ್ಟರೆ, ರಸ್ತೆಯ ಸುವ್ಯವಸ್ಥೆಯೂ ಇಲ್ಲ. ಬಹುತೇಕ ರಸ್ತೆಗಳು ಕಿರಿದಾದದ್ದು, ಇಕ್ಕಟ್ಟಾದದ್ದು. ವಿಶಾಲವಾದ ರಸ್ತೆಗಳನ್ನು ಮಾಡುವ ಭೂಪ್ರದೇಶವೂ ಅದಲ್ಲ. ಏಕೆಂದರೆ ಬಹುತೇಕ ಭೂಮಿ ಕಾಡು, ಗುಡ್ಡಗಳಿಂದಲೇ ತುಂಬಿಕೊಂಡಿದೆ. ಮರವನ್ನೋ, ಗುಡ್ಡವನ್ನೋ ಕಡಿದು ರಸ್ತೆ ನಿರ್ಮಿಸುವುದು ತುಂಬಾ ಕಷ್ಟದ ಕೆಲಸವಂತೂ ಹೌದು. ಆದ್ದರಿಂದ ಅನಿವಾರ್ಯಕ್ಕೆ ಎಷ್ಟು ಬೇಕೋ ಅಷ್ಟು ರಸ್ತೆಯನ್ನು ಆ ದೇಶ ನಿರ್ಮಿಸಿಕೊಂಡಿದೆ.

ನೀವು ದೇವರ ಸಮ್ಮುಖದಲ್ಲಿ ನಿಂತು ಮತ್ತೇನನ್ನೂ ಬೇಡಿಕೊಳ್ಳಬೇಡಿ, ದೇವರೇ ನನಗೆ ಆನೆ ಕೊಡು ಎಂದು ಕೇಳಿಕೊಳ್ಳಿ. ಇದು ಇತ್ತೀಚಿನ ದಿನಗಳಲ್ಲಿ ಕೇಳಿ ಬರುತ್ತಿರುವ ಮಾತು. ಇಲ್ಲಿ ಆನೆ ಎಂದರೆ ಗಜ ಅಲ್ಲ, ಆರೋಗ್ಯ ಮತ್ತು ನೆಮ್ಮದಿ. ಆರೋಗ್ಯದಿಂದ ಆ, ನೆಮ್ಮದಿಯಿಂದ ನೆ ಆರಿಸಿಕೊಂಡು ಜೋಡಿಸಿ ರಚಿಸಿದ ಆನೆ.

ಮನುಷ್ಯನಿಗಾದರೆ ಇದು ಸರಿ, ಆರೋಗ್ಯ ಮತ್ತು ನೆಮ್ಮದಿಗಿಂತ ಹೆಚ್ಚೇನು ಬೇಕು? ಮನುಷ್ಯನಾಗಿ ದೇವರಲ್ಲಿ ಆನೆ ಬೇಡುವುದು ಒಂದು ಕಡೆಯಾದರೆ, ದೇಶವಾಗಿ ಆನೆ ಬೇಡುವುದು ಮತ್ತೊಂದು ಕಡೆ. ಅದರಲ್ಲೂ ಕಾಂಬೋಡಿಯಾ, ಲಾವೋಸ್, ವಿಯೆಟ್ನಾಂ, ಥಾಯ್ಲೆಂಡ್‌ನಂಥ ದೇಶಗಳು ನಿಜವಾಗಿಯೂ ದೇವರಲ್ಲಿ ಆನೆ ಕೊಡು ಎಂದೂ, ಮನುಷ್ಯನಲ್ಲಿ ಆನೆಯನ್ನು ಉಳಿಸಿಕೊಡು ಎಂದೂ ಬೇಡಿಕೊಳ್ಳುವಂತಾಗಿದೆ.

ವರದಿಯ ಪ್ರಕಾರ, ಒಂದು ಕಾಲದಲ್ಲಿ ಸಾವಿರಕ್ಕೂ ಹೆಚ್ಚು ಆನೆಯನ್ನು ಹೊಂದಿದ್ದ ವಿಯೆಟ್ನಾಂನಲ್ಲಿ ಇಂದು ಕೇವಲ ಒಂದು ನೂರು ಆನೆ ಮಾತ್ರ ಉಳಿದುಕೊಂಡಿವೆ. ಥಾಯ್ಲೆಂಡ್‌ನಲ್ಲಿ ಆನೆಗಳ ಸಂಖ್ಯೆ ಇಳಿದಿದೆ, ಕಾಂಬೋಡಿಯಾ, ಮ್ಯಾನ್ಮಾರ್‌ನಂಥ ದಟ್ಟ ಅಡವಿ ಇರುವ ದೇಶಗಳಲ್ಲೂ ಆನೆಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಲಾವೋಸ್ ದೇಶದ ಕಥೆಯಂತೂ ಇನ್ನೂ ಚಿಂತಾಜನಕವಾಗಿದೆ.

ಒಂದು ಕಾಲದಲ್ಲಿ ಲಾವೋಸ್ ದೇಶವನ್ನು(ಹತ್ತು ಲಕ್ಷ ಆನೆಗಳ ಭೂಮಿ) ಎಂದು ಕರೆಯುತ್ತಿದ್ದರು. ಆ ಕಾಲದಲ್ಲಿ ಲಾವೋಸ್‌ನಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಆನೆ ಗಳಿದ್ದವಂತೆ. ಈಗ ಆ ಸಂಖ್ಯೆ ಒಂದು ಸಾವಿರಕ್ಕಿಂತಲೂ ಕೆಳಗೆ ಇಳಿದಿದೆ. ಹಾಗೆ ನೋಡಲು ಹೋದರೆ ಈಗ ಭೂಮಿಯ ಮೇಲೆ ಯಾವ ದೇಶದಲ್ಲಿಯೂ ಹತ್ತು ಲಕ್ಷ ಆನೆಗಳಿಲ್ಲ.

ಇಂದು ಅತಿ ಹೆಚ್ಚು ಆನೆಗಳನ್ನು ಹೊಂದಿದ ದೇಶವೆಂದರೆ ಆಫ್ರಿಕಾ ಖಂಡದ ಬೋಟ್ಸ್‌ವಾನಾ. ನಾಲ್ಕು ವರ್ಷದ ಹಿಂದಿನ ಗಣತಿಯ ಪ್ರಕಾರ, ಆ ದೇಶದಲ್ಲಿ ಒಂದು ಲಕ್ಷ ಮೂವತ್ತು ಸಾವಿರ ಆನೆಗಳಿವೆಯಂತೆ. ನಂತರದ ಸ್ಥಾನದಲ್ಲಿ ಒಂದು ಲಕ್ಷ ಆನೆಗಳನ್ನು ಹೊಂದಿರುವ ಜಿಂಬಾಬ್ವೆ ನಿಲ್ಲುತ್ತದೆ. ನಾಲ್ಕು ವರ್ಷದ ಹಿಂದಿನ ಗಣತಿಯಂತೆ, ಹದಿನೇಳು ಸಾವಿರ ಆನೆಗಳಿರುವ ಭಾರತ ಎಂಟನೆಯ ಸ್ಥಾನದಲ್ಲಿದೆ. ಅದರ ನಂತರ ಭಾರತದಲ್ಲಿ ಗಣತಿ ನಡೆದಂತಿಲ್ಲ.

ಇಲ್ಲಿ ಜನಗಣತಿಗೇ ಗತಿಯಿಲ್ಲ, ಇನ್ನು ಗಜಗಣತಿ ಯಾರಿಗೆ ಬೇಕು? ಇರಲಿ, ಇತ್ತೀಚಿಗೆ ಲಾವೋಸ್ ದೇಶಕ್ಕೆ ಹೋಗುವಾಗಲೇ ಅಲ್ಲಿರುವ ಆನೆಗಳನ್ನು ನೋಡಬೇಕು, ಅವುಗಳ ಬಗ್ಗೆ ಇನ್ನಷ್ಟು ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬೇಕೆಂಬ ಕುತೂಹಲವಿತ್ತು. ಆಗಲೇ ಹೇಳಿದಂತೆ, ಹತ್ತು ಲಕ್ಷ ಆನೆಗಳ ನೆಲ ಇಂದು ಆನೆಗಳಿಲ್ಲದೆ ಬರಡಾಗುತ್ತಿದೆ ಅಂದರೆ ನಂಬಲು ಕಷ್ಟವಾಗಿತ್ತು.

ಕಾರಣ, ಲಾವೋಸ್‌ನ ಅರ್ಧದಷ್ಟು ಭೂಭಾಗ ಅರಣ್ಯ ಪ್ರದೇಶ. ದಟ್ಟವಾದ ಅಡವಿಗಳಿದ್ದಲ್ಲಿ ಆನೆಗಳು ಇರಲೇಬೇಕು. ಅದೂ ಅಲ್ಲದೆ ಲಾವೋಸ್‌ನ ಅರಣ್ಯದಲ್ಲಿ ಆನೆಗಳನ್ನು ಬೇಟೆಯಾಡಿ ಕೊಲ್ಲುವಂಥ, ತಿನ್ನುವಂಥ ಯಾವುದೇ ಪ್ರಾಣಿಗಳೂ ಸದ್ಯಕ್ಕಂತೂ ಇಲ್ಲ. ಒಂದು ವರದಿಯ ಪ್ರಕಾರ ಲಾವೋಸ್‌ನ ಪ್ರಾಣಿ ಸಂಗ್ರಹಾಲಯದಲ್ಲಿ ಬಿಟ್ಟರೆ, ಅಡವಿಯಲ್ಲಿ ಒಂದೇ ಒಂದು ಹುಲಿಯೂ ಇಲ್ಲ.

2013ರಲ್ಲಿಯೇ ಲಾವೋಸ್ ನ ಅಡವಿಯಲ್ಲಿ ಕೊನೆಯ ಹುಲಿ ಕೊನೆಯುಸಿರೆಳೆಯಿತು ಎಂಬ ವರದಿಯಿದೆ. ಹಾಗೆಯೇ ಸಿಂಹವನ್ನು ಕೂಡ 2019ರಲ್ಲಿ ದಕ್ಷಿಣ ಆಫ್ರಿಕಾದಿಂದ ತರಿಸಿಕೊಂಡಿದ್ದಾರೆ. ಸಿಂಹಗಳ ಸಂತತಿಯನ್ನು ಪುನಃ ಬೆಳೆಸಬೇಕು, ಲಾವೋಸ್‌ನ ಅಡವಿಯಲ್ಲಿ ಸಿಂಹಗಳನ್ನು ಮರು ಸ್ಥಾಪಿಸಬೇಕು ಎಂಬ ನಿಟ್ಟಿನಲ್ಲಿ ಐದು ಹೆಣ್ಣು, ಐದು ಗಂಡು ಸಿಂಹವನ್ನು ತಂದು ಸಂತಾನಾಭಿವೃದ್ಧಿಯ ಪ್ರಯತ್ನ ನಡೆಯುತ್ತಿದೆ.

ಕಳೆದ ಐದು ವರ್ಷದಲ್ಲಿ ಅದು ಎಷ್ಟರಮಟ್ಟಿಗೆ ಫಲಕಾರಿಯಾಗಿದೆಯೋ ಗೊತ್ತಿಲ್ಲ, ಒಂದು ವೇಳೆ ಅವು ಇದ್ದಿದ್ದರೂ ಅವು ಆನೆಗಳ ತಂಟೆಗೆ ಹೋಗುವುದು ಕಡಿಮೆ. ಹಾಗಾದರೆ ಆನೆಗಳ ಸಂತತಿ ಕ್ಷೀಣಿಸಲು ಕಾರಣವಾದರೂ ಏನು ಎಂದು ಹುಡುಕುತ್ತಾ ಹೊರಟರೆ ಮೋಟಾಮೋಟಿ ಕಾಣುವುದು ಅರಣ್ಯನಾಶ ಒಂದೇ.

ಹೇಳಬೇಕು ಎಂದರೆ, ಲಾವೋಸ್ ಇಂದಿಗೂ ತನ್ನ ಸಂಪ್ರದಾಯ ಉಳಿಸಿಕೊಂಡ ನಾಡು. ಆ ಕಾರಣದಿಂದ ಆನೆಗಳು ಹೆಚ್ಚು ಮಹತ್ವ ಪಡೆಯುತ್ತವೆ. ಭಾರತದಲ್ಲಿ ಗೋವಿಗೆ ಇರುವ ಸ್ಥಾನ ಅಲ್ಲಿ ಆನೆಗಿದೆ. ಆ ದೇಶದಲ್ಲಿ 2-3 ರಾಷ್ಟ್ರೀಯ ಹೆದ್ದಾರಿಯನ್ನು ಬಿಟ್ಟರೆ, ರಸ್ತೆಯ ಸುವ್ಯವಸ್ಥೆಯೂ ಇಲ್ಲ. ಬಹುತೇಕ ರಸ್ತೆಗಳು ಕಿರಿದಾದದ್ದು, ಇಕ್ಕಟ್ಟಾದದ್ದು.

ವಿಶಾಲವಾದ ರಸ್ತೆಗಳನ್ನು ಮಾಡುವ ಭೂಪ್ರದೇಶವೂ ಅದಲ್ಲ. ಏಕೆಂದರೆ ಬಹುತೇಕ ಭೂಮಿ ಕಾಡು, ಗುಡ್ಡಗಳಿಂದಲೇ ತುಂಬಿಕೊಂಡಿದೆ. ಮರವನ್ನೋ, ಗುಡ್ಡವನ್ನೋ ಕಡಿದು ರಸ್ತೆ ನಿರ್ಮಿಸುವುದು ತುಂಬಾ ಕಷ್ಟದ ಕೆಲಸವಂತೂ ಹೌದು. ಆದ್ದರಿಂದ ಅನಿವಾರ್ಯಕ್ಕೆ ಎಷ್ಟು ಬೇಕೋ ಅಷ್ಟು ರಸ್ತೆಯನ್ನು ಆ ದೇಶ ನಿರ್ಮಿಸಿಕೊಂಡಿದೆ.

ಇನ್ನು, ದೊಡ್ಡ ಅಣೆಕಟ್ಟಾಗಲಿ, ವಿದ್ಯುತ್ ಉತ್ಪಾದನಾ ಘಟಕಗಳಾಗಲಿ, ಹೇಳಿಕೊಳ್ಳುವಂಥ ದೊಡ್ಡ ಕಾರ್ಖಾನೆಯಾಗಲಿ ಯಾವುದೂ ಇಲ್ಲ. ಆದರೂ ಆನೆಗಳ ಸಂಖ್ಯೆ ಘಟಿಸಲು ಅರಣ್ಯ ನಾಶವೇ ಮೂಲ ಕಾರಣ ಎಂದು ಹೇಳಲಾಗುತ್ತಿದೆ. ಅಲ್ಲದೆ, ಕೆಲವು ವರ್ಷಗಳ ಹಿಂದಿನವರೆಗೂ ಅಲ್ಲಿಯೂ ಆನೆಯ ಶಿಕಾರಿ ನಡೆಯುತ್ತಿತ್ತಂತೆ.

ದಂತಚೋರರು ಯಾವ ದೇಶದಲ್ಲಿ ಇಲ್ಲ ಹೇಳಿ? ಇತ್ತೀಚಿನ ವರ್ಷಗಳಲ್ಲಿ ಆನೆಯ ಶಿಕಾರಿಗೆ ಅಲ್ಲಿಯ ಸರಕಾರ ಸಂಪೂರ್ಣ ಕಡಿವಾಣ ಹಾಕಿದೆ. ಇರಲಿ, ಲಾವೋಸ್‌ನಲ್ಲಿ ನನ್ನ ಗಜದರ್ಶನದ ಸಂಕಲ್ಪ ಈಡೇರಿತು. ನಾನು ಪೂರ್ವ ನಿರ್ಧರಿತ (ಪ್ಯಾಕೇಜ್ ಟೂರ್) ಪ್ರವಾಸ ಹೋಗುವುದು ತೀರಾ ಎಂದರೆ ತೀರಾ ಕಡಿಮೆ. ಅಲ್ಲಿಯೂ ಅಷ್ಟೇ, ಯಾವುದೂ ನಿರ್ದಿಷ್ಟವಾಗಿರಲಿಲ್ಲ, ನಿರ್ಧಾರವಾಗಿರಲಿಲ್ಲ.

ಆದರೆ ಆನೆಗಳನ್ನು ನೋಡಲಿಕ್ಕೆ ಒಬ್ಬನೇ ಹೋಗಲು ಸಾಧ್ಯವಿರಲಿಲ್ಲ. ಆ ವಿಷಯದಲ್ಲಿ ರಿಸ್ಕ್ ತೆಗೆದುಕೊಳ್ಳುವಂತಿರಲಿಲ್ಲ. ಆದ್ದರಿಂದ ಒಂದು ಮಿನಿ ಬಸ್‌ನಲ್ಲಿ ಒಬ್ಬ ಗೈಡ್, 10-12 ಜನರನ್ನು ಕೂಡಿಕೊಂಡು ಆನೆ ಇರುವ ಸ್ಥಳಕ್ಕೆ ಹೊರಟೆ. ನಾವು ಉಳಿದುಕೊಂಡಿದ್ದ ಲುವಾಂಗ್ ಪ್ರಬಾಂಗ್ ಪಟ್ಟಣದಿಂದ ಆನೆ ಶಿಬಿರ ತಲುಪಿ, ಸುತ್ತಲೂ ನೋಡಿದರೆ ಒಂದು ಅಪರೂಪದ ಅನುಭವ. ಅಲ್ಲಿ ಆನೆಗಳು ಆರಾಮದಲ್ಲಿ ಆಚೆ-ಈಚೆ ಓಡಾಡುತ್ತಿದ್ದವು.

ಅವುಗಳ ಕಾಲಿಗೆ ಸರಪಳಿ ಇರಲಿಲ್ಲ, ಹಗ್ಗ ಕಟ್ಟಿರಲಿಲ್ಲ, ಕಿವಿಗಳಿಗೆ ಅಂಕುಶ ನೇತು ಹಾಕಿರಲಿಲ್ಲ. ಕೆಲವು ಆನೆಗಳ ಪಕ್ಕದಲ್ಲಿ ಮಾವುತರೂ ಇರಲಿಲ್ಲ. ಅಲ್ಲಿ ಒಂದೊಂದು ಆನೆಗೂ ಒಬ್ಬರೋ-ಇಬ್ಬರೋ ಮಾವುತರು ನೇಮಕವಾಗಿದ್ದರು. ಆದರೆ ಅದು ಊಟದ ಸಮಯವಾದದ್ದರಿಂದ ಕೆಲವು ಮಾವುತರು ಬಂದ ಪ್ರವಾಸಿಗರಿಗೆ ಊಟ ಬಡಿಸುವುದರಲ್ಲಿ ನಿರತರಾಗಿದ್ದರು.

ವಿಶೇಷವೆಂದರೆ, ಯಾವುದೇ ಬಂಧ, ನಿರ್ಬಂಧವೂ ಇಲ್ಲದ ಆನೆಗಳ ಪಕ್ಕದಲ್ಲಿ ಪ್ರವಾಸಿಗರು ಸುಳಿದಾಡುತ್ತಿದ್ದರೆ ಅವು ಏನೂ ಮಾಡುತ್ತಿರಲಿಲ್ಲ. ನಾನು ಮಾವುತ ಇದ್ದ ಆನೆಯ ಬಳಿಗೆ ಹೋಗಿದ್ದೆ. ಆನೆಯ ಗಾತ್ರಕ್ಕೆ ಭಯಪಡುತ್ತಿದ್ದ ನಾನು ಲಾವೋಸ್‌ನ ಆನೆಗಳ ಬಗ್ಗೆ ಓದಿ, ಕೇಳಿದ್ದರಿಂದಲೋ ಏನೋ, ಅಲ್ಲಿಯ ಆನೆಯ ಪಕ್ಕದಲ್ಲಿ ನಿಂತಾಗ ಭಯವಾಗಲಿಲ್ಲ.

ಲಾವೋಸ್‌ನಲ್ಲಿ ಆನೆಗಳು ಮನುಷ್ಯರ ಜತೆ ಮನುಷ್ಯರಾಗಿಯೇ ಇರುತ್ತವೆ, ಮಾನವಸ್ನೇಹಿಯಾಗಿ ವರ್ತಿಸುತ್ತವೆ ಎಂದು ಕೇಳಿದ್ದು ನೂರಕ್ಕೆ ನೂರರಷ್ಟು ಸತ್ಯ ಎಂದೆನಿಸಿತು. ಆದರೂ ಇನ್ನಷ್ಟು ವಿಷಯಗಳನ್ನು ತಿಳಿದುಕೊಳ್ಳಲು ನನಗೆ ಮಾವುತ ಬೇಕಾಗಿತ್ತು. ನಾವು ಹೋದ ಸ್ಥಳದಲ್ಲಿ ಆನೆಗಳು ಸ್ವಚ್ಛಂದವಾಗಿ ಓಡಾಡುತ್ತಿದ್ದವು. ಅಲ್ಲಿಯೇ ನಮಗೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನೂ ಮಾಡಲಾಗಿತ್ತು.

ಊಟಕ್ಕೂ ಮೊದಲು ಸಮಯಾವಕಾಶ ಇದ್ದದ್ದರಿಂದ ಆನೆಯ ಬಳಿ ಹೊರಟೆ. ನಾನು ಮಾತನಾಡುವುದಕ್ಕಿಂತ ಮುಂಚೆಯೇ ಮಾವುತ ನನ್ನ ಕೈಯಲ್ಲಿ ಕಬ್ಬು ಕೊಟ್ಟು, ಆನೆಗೆ ತಿನ್ನಿಸಿ ಎಂದ. ಮೊದಲು ಮಾತಾಡಿ ಆಮೇಲೆ ಆನೆಗೆ ತಿನ್ನಿಸುತ್ತೇನೆ ಎಂದರೂ ಕೇಳಲಿಲ್ಲ. ಅವನ ಮಾತಿಗೆ ಒಪ್ಪಿ ನಾನು ಆನೆಗೆ ಕಬ್ಬು, ಬಾಳೆಹಣ್ಣು ತಿನ್ನಿಸುತ್ತಿರುವಾಗ ಆತ ಆನೆಯನ್ನು ಮುಟ್ಟುವಂತೆ ಹೇಳಿದ.

ನಿಧಾನಕ್ಕೆ ಸೊಂಡಿಲು ಮುಟ್ಟಿದೆ. ಇನ್ನೂ ಹತ್ತಿರ ಹೋಗಿ, ಕಿವಿಯ ಹಿಂಭಾಗವನ್ನು ನೇವರಿಸಿ ಎಂದ. ಆಜ್ಞಾಧಾರಿಯಾದೆ. ಒಂದೆರಡು ನಿಮಿಷ ಅದರ ಜತೆಗಿದ್ದು ಮೈ ನೇವರಿಸಿ, ಫೋಟೋ ಕ್ಲಿಕ್ಕಿಸಿಕೊಂಡು ತಿರುಗಿ ಬಂದಾಗ ಮಾವುತನೇ ಮಾತು ಆರಂಭಿಸಿದ್ದ.

ನಿಮ್ಮಲ್ಲಿ ಸಾಕಷ್ಟು ಪ್ರಶ್ನೆಗಳಿವೆ ಎಂಬುದು ಗೊತ್ತು. ಆದರೆ ನೀವು ಆನೆಯನ್ನು ಮುಟ್ಟಿ, ಸಂವಹನ ನಡೆಸಿ, ಸಾಮೀಪ್ಯವನ್ನು ಅನುಭವಿಸಿದ ನಂತರ ನಿಮ್ಮ ಭಾವನೆಗಳು ಬದಲಾಗುತ್ತವೆ. ಆನೆಯ ಬಗ್ಗೆ ಇರುವ ಭಯ ಸ್ವಲ್ಪಮಟ್ಟಿಗಾದರೂ ದೂರವಾಯಿತಲ್ಲ? ಎಂದ. ಅದು ನಿಜ ಎಂದೆನಿಸಿತು.

ಎಷ್ಟೋ ಬಾರಿ ನಾವು ಭಯದಿಂದ ಎಷ್ಟೋ ವಸ್ತುಗಳ, ವಿಷಯಗಳ ಹತ್ತಿರವೇ ಹೋಗುವುದಿಲ್ಲ. ಒಮ್ಮೆ ಅದರ ಕುರಿತಾಗಿ ತಿಳಿದುಕೊಂಡರೆ ನಮ್ಮ ಭಯ ತಕ್ಕಮಟ್ಟಿಗೆ ನಿವಾರಣೆಯಾಗುತ್ತದೆ. ಮಾವುತ ಮಾತು ಮುಂದುವರಿಸಿದ್ದ, ಮನುಷ್ಯನಿಗೆ ಬಹಳ ಹತ್ತಿರವಾದ ಪ್ರಾಣಿಗಳು ಎಂದರೆ ಹಸು, ನಾಯಿ ಮತ್ತು ಆನೆ. ಇವೆಲ್ಲವೂ ಮನುಷ್ಯನ ಮಾತನ್ನು, ಭಾವನೆಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಲ್ಲವು.



ಇದರಲ್ಲಿ ಹಸು ಮತ್ತು ನಾಯಿ ಸಾಕುಪ್ರಾಣಿಗಳು. ಅಡವಿಯಲ್ಲಿರುವ ಪ್ರಾಣಿಗಳಲ್ಲಿ ಮನುಷ್ಯನಿಗೆ ತೀರಾ ಹತ್ತಿರವಾದ, ಮನುಷ್ಯನ ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಏಕೈಕ ಪ್ರಾಣಿ ಆನೆ. ಮಂಗಗಳು ಅರ್ಧ ಮನುಷ್ಯರೇ ಆಗಿರುವುದರಿಂದ ಅವುಗಳನ್ನು ಈ ಜಾತಿಗೆ ಸೇರಿಸುವುದು ಬೇಡ ಎಂದ.

ಇಲ್ಲಿ ಸುಮಾರು ಆನೆಗಳಿವೆ. ನನ್ನ ಕಣ್ಣಿಗೆ ಎಲ್ಲವೂ ಒಂದೇ ರೀತಿ ಕಾಣುತ್ತಿವೆ. ಪ್ರತಿ ಆನೆಗೂ ಮಾವುತರಿದ್ದಾರೆ. ಯಾವ ಆನೆಯ ಮಾವುತ ಯಾರು ಎಂದು ಹೇಗೆ ಗುರುತು ಹಿಡಿಯುತ್ತೀರಿ? ಎಂದು ಕೇಳಿದೆ. ಅದಕ್ಕೆ, ಇಲ್ಲಿಯ ಸರಕಾರ ಪ್ರತಿಯೊಂದು ಆನೆಗೂ ಗುರುತಿನ ಚೀಟಿ ನೀಡಿದೆ. ನೀವು ಬೇಕಾದರೆ ಅದನ್ನು ಆನೆಗಳ ಪಾಸ್‌ಪೋರ್ಟ್ ಎಂದು ಹೇಳಬಹುದು.

ಅಧಿಕಾರಿಗಳು ಬಂದಾಗ ನಾವು ಆ ಗುರುತಿನ ಚೀಟಿಯನ್ನು ತೋರಿಸಬೇಕಾಗುತ್ತದೆ. ಆದರೆ, ನಮಗೆ ನಮ್ಮ ಆನೆಯನ್ನು ಗುರುತಿಸಲು ಯಾವುದೇ ಕಷ್ಟವಿಲ್ಲ. ಅವಳಿ-ತ್ರಿವಳಿ ಮಕ್ಕಳಾದರೂ ತಾಯಿ-ತಂದೆ ಅವರನ್ನು ಹೇಗೆ ಗುರುತಿಸುತ್ತಾರೋ ಹಾಗೆ ನಮ್ಮ ಆನೆಯನ್ನು ನಾವು ಗುರುತಿಸುತ್ತೇವೆ. ಅಷ್ಟೇ ಅಲ್ಲ, ಆನೆಗಳೇ ನಮ್ಮ ಗುರುತು ಹಿಡಿಯುತ್ತವೆ.

ನಾನು ಕಳೆದ 25 ವರ್ಷದಿಂದ ಇದೇ ಆನೆಯ ಜತೆ ಇದ್ದೇನೆ. ಈ ಆನೆ ನನ್ನ ಕಣ್ಣ ಮುಂದೆಯೇ ಹುಟ್ಟಿದೆ. ನಾನೇ ಅದನ್ನು ಬೆಳೆಸಿದ್ದೇನೆ. ಈ ಆನೆಯನ್ನು ಬೆಳೆಸುವಾಗ ಒಂದು ದಿನವೂ, ಒಂದೇ ಒಂದು ಪೆಟ್ಟನ್ನೂ ಕೊಟ್ಟಿಲ್ಲ. ಅದನ್ನು ಕಟ್ಟಿಹಾಕಲಿಲ್ಲ. ಬಾಲ್ಯದಲ್ಲಿ ಅದು ಮಾಡಿದ ಪುಂಡಾಟಗಳನ್ನು ಸಹಿಸಿಕೊಂಡಿದ್ದೇನೆ. ಈಗ ನನಗಿಂತಲೂ ದೊಡ್ಡದಾಗಿ ಬೆಳೆದ ಈ ಆನೆ ನಾನು ಹೇಳಿದಂತೆಯೇ ಕೇಳುತ್ತದೆ. ನನ್ನ ಯಾವ ಮಾತನ್ನೂ ಮೀರುವುದಿಲ್ಲ. ಅದಕ್ಕೆ ನನ್ನ ನಗು, ಸಂತೋಷ ಅರ್ಥವಾಗುತ್ತದೆ. ನನ್ನ ಬೇಸರವೂ ಅರ್ಥವಾಗುತ್ತದೆ.

ನನಗೂ ಅಷ್ಟೇ, ಅದರ ಭಾವನೆ, ಭಾಷೆ ಅರ್ಥಮಾಡಿಕೊಳ್ಳಲು ಅದರ ಎರಡು ಕಣ್ಣುಗಳೇ ಸಾಕು ಎಂದು ಆತ ಹೇಳುವಾಗ ನನ್ನ ಕಣ್ಣುಗಳು ತೇವವಾಗಿದ್ದವು. ನನಗೆ ಆಶ್ಚರ್ಯ ಎನಿಸಿದ್ದು, ತನ್ನ ಜೀವನದ 25 ವರ್ಷವನ್ನು ಈತ ಒಂದೇ ಪ್ರಾಣಿಯೊಂದಿಗೆ, ಒಂದೇ ಕೆಲಸ ಮಾಡಿಕೊಂಡು ಕಳೆದಿದ್ದಾನೆ. ಆತನನ್ನು ನೋಡಿದರೆ ಆತ ಸಂಬಳಕ್ಕಾಗಿ ಕೆಲಸ ಮಾಡುತ್ತಿದ್ದಾನೆ ಎಂದಾಗಲಿ, ಆನೆಯ ಕೆಲಸ ಮಾಡಿ ಆತ ಸುಸ್ತಾಗಿದ್ದಾನೆ ಎಂದಾಗಲಿ, ಕೆಲಸ ಬೇಸರ ತರಿಸಿದೆ ಎಂದಾಗಲಿ ಅನ್ನಿಸಲೇ ಇಲ್ಲ.



ತನ್ನ 15-20ನೇ ವರ್ಷಕ್ಕೆ ಆತ ಈ ಕೆಲಸ ಆರಂಭಿಸಿರಬಹುದು. ಹೆಚ್ಚೆಂದರೆ ಆತ ಇನ್ನೂ 25 ವರ್ಷ ಬದುಕಿರಬಹುದು. ಇದನ್ನೇ ಮನಸ್ಸಿನಲ್ಲಿಟ್ಟುಕೊಂಡು ಕೇಳಿದೆ, ಇನ್ನು ಎಷ್ಟು ವರ್ಷ ಇದೇ ಕೆಲಸ ಮಾಡಬೇಕೆಂದಿರುವೆ? ನಿನಗೆ ಬೇರೆ ಏನಾದರೂ ಮಾಡಬೇಕು, ನಿವೃತ್ತ ಜೀವನ ಸಾಗಿಸಬೇಕು ಎಂಬ ಆಸೆಯಿಲ್ಲವೇ?. ಆತ ಹೃದಯಾಳದಿಂದ ಹೇಳಿದನೋ, ತಮಾಷೆಗಾಗಿ ಹೇಳಿದನೋ, ನಾನು ಈ ಆನೆಯನ್ನು ನನ್ನ ಹೆಂಡತಿ ಮತ್ತು ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸುತ್ತೇನೆ.

ನಾನು ಬದುಕಿರುವವರೆಗೂ ಇದೇ ಕೆಲಸ ಮಾಡುತ್ತೇನೆ. ಇದೇ ಆನೆಯೊಂದಿಗೆ ಬದುಕುತ್ತೇನೆ. ಇದು ನನ್ನ ಮನೆಯವರಿಗೂ ತಿಳಿದಿರುವ ಸತ್ಯ. ಆತನ ಮಾತು ತಮಾಷೆ ಎಂದು ಅನ್ನಿಸಲಿಲ್ಲ. ಕೊನೆಯ ಪ್ರಶ್ನೆ ಎಂಬಂತೆ ಆತನನ್ನು ಕೇಳಿದೆ, ನಿನಗೆ ಯಾವಾಗಲೂ ಬೇಸರವೇ ಆಗುವುದಿಲ್ಲವೇ?. ಆತ ನನ್ನ ಕಿವಿಯಲ್ಲಿ ಪಿಸುಗುಟ್ಟಿದ.

ಆನೆಯ ಬೆನ್ನಿನ ಮೇಲೆ ಭಾರ ಹೊರಿಸಿದಾಗ, ಮನುಷ್ಯರು ಸವಾರಿ ಮಾಡುವಾಗ ಬೇಸರವಾಗುತ್ತದೆ. ಆನೆ ಎಷ್ಟೇ ಶಕ್ತಿಯುತವಾದ ಪ್ರಾಣಿಯಾದರೂ, ತನ್ನ ಬಲದಿಂದ ದೊಡ್ಡ ದೊಡ್ಡ ಮರಗಳನ್ನೇ ಬುಡಮೇಲು ಮಾಡುವ ತಾಕತ್ತಿದ್ದರೂ ಅದರ ಬೆನ್ನು ಭಾರ ಹೊರಲು ಯೋಗ್ಯವಾದದ್ದಲ್ಲ. ಅದರ ಕಾಲಿಗೆ ವಜ್ಜೆ ಕಟ್ಟಿ ಎಳೆಸಬಹುದು, ಸೊಂಡಲಿನಲ್ಲಿ ತಾಕತ್ತು ಇರುವಷ್ಟನ್ನು ಎತ್ತಿ ಸಾಗಿಸಬಹುದು. ಆದರೆ ಕತ್ತೆಯಂತೆ ಆನೆಯ ಬೆನ್ನಿನ ಮೇಲೆ ಭಾರ ಹೊರಿಸಬಾರದು ಎಂದ.

ಸರಿ, ಆದರೆ ಕುದುರೆ, ಒಂಟೆ ಸವಾರಿ ಮಾಡಿದಂತೆ ಆನೆ ಸವಾರಿಯನ್ನೂ ಮನುಷ್ಯರು ಅದರಲ್ಲೂ ಮಕ್ಕಳು ಇಷ್ಟಪಡುತ್ತಾರಲ್ಲ? ಅಷ್ಟಕ್ಕೂ ಆ ಗಾತ್ರದ ಪ್ರಾಣಿಯ ಮೇಲೆ 50-60 ಕಿಲೋ ತೂಗುವ ಒಬ್ಬ ಮನುಷ್ಯ ಕುಳಿತರೆ ಆನೆಗೆ ತೊಂದರೆಯಾಗಲಿಕ್ಕಿಲ್ಲ. ನಮ್ಮ ಮೈ ಮೇಲೆ ಸೊಳ್ಳೆ ಕುಳಿತಂತೆ ಆಗಬಹುದು. ಆನೆ ಸವಾರಿಯಿಂದ ಮಕ್ಕಳು ಖುಷಿಪಟ್ಟುಕೊಳ್ಳುತ್ತಾರಲ್ಲ? ಎಂದೆ.

ಮಾವುತ ಹೇಳಿದ, ಮನುಷ್ಯರಿಗೆ ಖುಷಿಯಾಗಬಹುದು, ಆನೆಗಲ್ಲ. ನೀವೇ ಹೇಳಿ ದಂತೆ ಮನುಷ್ಯ ಆನೆಯ ಮುಂದೆ ಸೊಳ್ಳೆಯಂತಿರ ಬಹು ದು. ಮನುಷ್ಯನ ಮೈಮೇಲೆ ಸೊಳ್ಳೆ ಬಂದು ಕುಳಿತಾಗ ಮನುಷ್ಯ ಏನು ಮಾಡುತ್ತಾನೆ? ಅದು ಸೊಳ್ಳೆಯ ಮರಿಯೋ, ಸಣ್ಣದೋ ದೊಡ್ಡದೋ ಎಂದು ನೋಡುವುದಿಲ್ಲ. ಸೊಳ್ಳೆಯಾದರೂ ಕಚ್ಚುತ್ತದೆ ಎಂದುಕೊಳ್ಳಿ.

ನೊಣ ಬಂದು ಕುಳಿತಾಗಲೂ, ಕಚ್ಚದ ಇರುವೆ ಮೈಮೇಲೆ ಹತ್ತಿದಾಗಲೂ ಮನುಷ್ಯ ಮೈಕೊಡವಿಕೊಳ್ಳುವುದಿಲ್ಲವೇ? ಪ್ರತಿಯೊಂದು ಪ್ರಾಣಿಗೂ ಅದರದ್ದೇ ಆದ ಒಂದು ವಲಯ ಇರುತ್ತದೆ. ಯಾವುದೇ ಪ್ರಾಣಿಯಾದರೂ ಕೆಲವನ್ನು ಇಷ್ಟಪಡುತ್ತವೆ, ಕೆಲವನ್ನು ಇಲ್ಲ. ಅವುಗಳಿಗೆ ಮಾತು ಬರುವುದಿಲ್ಲ ಎಂಬ ಮಾತ್ರಕ್ಕೆ, ಅವು ಸುಮ್ಮನಿರುತ್ತವೆ ಎಂಬ ಕಾರಣಕ್ಕೆ ಅವು ಅದನ್ನು ಇಷ್ಟಪಡುತ್ತವೆ ಎಂದಲ್ಲ.

ನಿಜವಾಗಿಯೂ ಪ್ರೀತಿಯಿದ್ದರೆ, ನೀವು ಅದರ ಮೈ ನೇವರಿಸಿ, ಅಪ್ಪಿಕೊಳ್ಳಿ, ಅದರೊಂದಿಗೆ ಮಾತನಾಡಿ. ವಾರವೋ, ತಿಂಗಳೋ ಇದ್ದು ಅದರ ಭಾವನೆಯನ್ನು, ಭಾಷೆಯನ್ನು ಕಲಿತುಕೊಳ್ಳಿ. ಆಗ ನಿಮಗೆ ಒಂದು ಫೋಟೋಕ್ಕಾಗಿ ಅದರ ಮೇಲೆ ಹತ್ತಿ ಕುಳಿತುಕೊಂಡದ್ದಕ್ಕಿಂತ ಹೆಚ್ಚು ಖುಷಿಯಾಗುತ್ತದೆ.

ನನ್ನಲ್ಲಿ ಮಾತಿರಲಿಲ್ಲ ಅವನ ಕೈಗೆ ಸ್ವಲ್ಪ ಹಣ ಇಡಲು ಹೋದೆ. ಆತ ಎರಡು ಹೆಜ್ಜೆ ಹಿಂದೆ ಹೋಗಿ ಹೇಳಿದ, ನಿಮಗೆ ಏನೇ ಕೊಡಬೇಕೆಂದಿದ್ದರೂ ಡಬ್ಬದಲ್ಲಿ ಹಾಕಿ. ಅದು ಆನೆಗಳ ಉಪಚಾರಕ್ಕೆ, ರಕ್ಷಣೆಗೆ ಬಳಕೆಯಾಗುತ್ತದೆ. ನನಗೆ ಹಣ ಬೇಡ ಎಂದು ಒಂದು ಡಬ್ಬ ತೋರಿಸಿದ. ನಾನು ಡಬ್ಬದಲ್ಲಿ ಹಣ ಹಾಕುವಾಗ ಆತನದ್ದೇ ಭಾಷೆಯಲ್ಲಿ ಆನೆ ಕಡೆ ತಿರುಗಿ ಏನೋ ಹೇಳಿದ. ಅದು ಸೊಂಡಲು ಎತ್ತಿ ಅದರದ್ದೇ ಭಾಷೆಯಲ್ಲಿ ಏನೋ ಹೇಳಿತು. ನನಗೆ ಭಾಷೆ ಅರ್ಥವಾಗಲಿಲ್ಲ, ಭಾವನೆ ಅರ್ಥವಾಗಿತ್ತು. ಲಾವೋಸ್ ದೇಶದ ಜನರ ಮನವೂ ತಿಳಿದಿತ್ತು. ಮನಸ್ಸಿನಲ್ಲಿಯೇ ಕೇಳಿಕೊಂಡೆ, ದೇವರೇ, ಲಾವೋಸ್ ದೇಶಕ್ಕೆ ಎರಡೂ ಆನೆ ಕೊಡು.

**- ಕಿರಣ್ ಉಪಾಧ್ಯಾಯ,** ಬಹ್ರೈನ್

> ಒಂದು ಕಾಲದಲ್ಲಿ ಸಾವಿರಕ್ಕೂ ಹೆಚ್ಚು ಆನೆಯನ್ನು ಹೊಂದಿದ್ದ ವಿಯೆಟ್ನಾಂನಲ್ಲಿ ಇಂದು ಕೇವಲ ಒಂದು ನೂರು ಆನೆ ಮಾತ್ರ ಉಳಿದುಕೊಂಡಿವೆ. ಥಾಯ್ಲೆಂಡ್‌ನಲ್ಲಿ ಆನೆಗಳ ಸಂಖ್ಯೆ ಇಳಿದಿದೆ, ಕಾಂಬೋಡಿಯಾ, ಮ್ಯಾನ್ಮಾರ್‌ನಂಥ ದಟ್ಟ ಅಡವಿ ಇರುವ ದೇಶಗಳಲ್ಲೂ ಆನೆಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಲಾವೋಸ್ ದೇಶದ ಕಥೆಯಂತೂ ಇನ್ನೂ ಚಿಂತಾಜನಕವಾಗಿದೆ.

# ಶಿಕ್ಷಣಕ್ಕೆ.... ಹೊಸ ವ್ಯಾಖ್ಯಾನ

ಅದೊಂದು ಶಾಲೆ. ಆ ಶಾಲೆಯಲ್ಲಿ ಶಾಲೆ ಮುಗಿಯುವ ಸಮಯಕ್ಕೆ ಹೊಡೆಯುವ ಘಂಟೆಯ ಶಬ್ದಕ್ಕೆ ಎಲ್ಲ ಶಿಕ್ಷಕರು ಧಾವಿಸಿ ಮನೆಗೆ ಓಡುವ ಧಾವಂತದಲ್ಲಿ, ಇದ್ದರೆ ಕೇವಲ ಓರ್ವ ವ್ಯಕ್ತಿ ಮಾತ್ರ ಆರಾಮಾಗಿ ಇರುತ್ತಿದ್ದರು.

ವಿದ್ಯಾರ್ಥಿಗಳು ಕೂಡ ಮನೆಗೆ ಓಡುವ ಆತುರದಲ್ಲಿ ಇರುತ್ತಿದ್ದರು. ಆದರೆ ಅದೊಬ್ಬ ವಿದ್ಯಾರ್ಥಿ ಮಾತ್ರ ತನ್ನ ಗುರುಗಳು ಹೀಗೇಕೆ ಶಾಲೆಯಲ್ಲಿಯೇ ಉಳಿದುಕೊಳ್ಳಲು ಬಯಸುತ್ತಾರೆ ಎಂಬುದನ್ನು ತಿಳಿಯುವ ಕಾತುರದಿಂದ ಆ ದಿನ ಶಾಲೆ ಬಿಟ್ಟೊಡನೆ ಮನೆಯತ್ತ ಧಾವಿಸಲಿಲ್ಲ, ಬದಲಾಗಿ ಶಾಲೆಯ ಹೊರ ಆವರಣದಲ್ಲಿ ಯಾರೋ ಬಂದು ತನ್ನನ್ನು ಕರೆದೊಯ್ಯುವರು ಎಂಬ ರೀತಿಯಲ್ಲಿ ಕಾಯುತ್ತಾ ನಿಂತುಕೊಂಡ. ಆ ಶಿಕ್ಷಕರಿಗೂ ಕೂಡ ಆ ಬಾಲಕ ಅವರನ್ನು ಹಿಂಬಾಲಿಸಬಲ್ಲ ಎಂಬ ಸುಳಿವೇ ಸಿಗದಂತೆ ಆತನ ವರ್ತನೆ ಇತ್ತು.

ಪ್ರತಿಯೊಂದು ತರಗತಿಯ ಕೋಣೆಗಳು ಖಾಲಿಯಾದವು. ಶಾಲೆಯ ಕಾರಿಡಾರುಗಳಲ್ಲಿ ಮಕ್ಕಳ ಸಂಖ್ಯೆ ಇಳಿಮುಖವಾಗುತ್ತಾ ಕ್ರಮೇಣ ಎಲ್ಲವೂ ಶಾಂತವಾಯಿತು. ಇದೀಗ ಆ ಶಿಕ್ಷಕರು ಎರಡು ಕುರ್ಚಿಗಳನ್ನು ತಂದು ಹೊರಗೆ ಹಾಕಿಕೊಂಡರು. ಯಾವಾಗಲೂ ಶಾಲೆಗೆ ತಾವು ತಂದಿರುತ್ತಿದ್ದ ಪುಟ್ಟ ಬ್ಯಾಗನ್ನು ಕುರ್ಚಿಯ ಮೇಲಿಟ್ಟು ಅದನ್ನು ತೆರೆದು ಅದರಿಂದ ಹಳೆಯ ಡೈರಿಯನ್ನು ಹೊರಗೆ ತೆಗೆದರು. ಕಂದು ಬಣ್ಣದ ಹೊರ ಆವರಣವನ್ನು ಹೊಂದಿದ್ದ ಆ ಡೈರಿಯನ್ನು ತೆಗೆದು ಡೆಸ್ಕ್‌ನ ಮೇಲೆ ಕುಳಿತುಕೊಂಡು ಅದರಲ್ಲಿ ಬರೆಯಲಾರಂಭಿಸಿದರು.

ವಿದ್ಯಾರ್ಥಿಗೆ ತುಸು ಸೋಜಿಗವಾಯಿತು. ಅದು ತಮ್ಮ ತರಗತಿಯ ಹಾಜರಿ ಪುಸ್ತಕವಾಗಿರಲಿಲ್ಲ. ಪ್ರತಿ ಬಾರಿಯೂ ತೆಗೆದುಕೊಳ್ಳುವ ಪರೀಕ್ಷೆಯ ಅಂಕಗಳನ್ನು ನಮೂದಿಸುವ ಪುಸ್ತಕವು ಕೂಡ ಅದಾಗಿರಲಿಲ್ಲ... ಹಾಗಾದರೆ ಗುರುಗಳು ಏನನ್ನು ಬರೆಯುತ್ತಿದ್ದಾರೆ ಎಂಬ ಕುತೂಹಲ ಆತನಲ್ಲಿ ಸಮಯ ಕಳೆದಂತೆ ಹೆಚ್ಚಾಯಿತು.


ಅದೇ ಸಮಯದಲ್ಲಿ ಶಾಲೆಯ ಕಾರ್ಯದರ್ಶಿ ಹೆಡ್ ಮಾಸ್ತರರ ಕೋಣೆಯಿಂದ ಈ ಶಿಕ್ಷಕರಿಗೆ ಕರೆ ಕಳುಹಿಸಿದರು. ಬರೆಯುತ್ತಿದ್ದ ಡೈರಿಯನ್ನು ಹಾಗೆಯೇ ಬಿಟ್ಟು ಆ ಶಿಕ್ಷಕ ತರಗತಿಯ ಕೋಣೆಯಿಂದ ಹೊರಟುಹೋದರು ಹೆಡ್ ಮಾಸ್ತರರ ಕೋಣೆಗೆ ಶಿಕ್ಷಕರು ಹೋಗುವುದನ್ನೇ ಕಾಯುತ್ತಿದ್ದ ಬಾಲಕ ನಿಧಾನವಾಗಿ ಯಾರಿಗೂ ಕಾಣದಂತೆ ಡೆಸ್ಕ್‌ನ ಬಳಿ ಬಂದು ನಿಂತನು. ಡೈರಿಯ ಮೇಲೆ ಕಣ್ಣಾಡಿಸಿದನು.

- ವಾರಗಳ ನಂತರ ವಿಮಲ ತನ್ನ ಕೈಯನ್ನು ಮೊದಲ ಬಾರಿಗೆ ಎತ್ತಿದಳು

- ಜಯಂತ ಮೊತ್ತ ಮೊದಲ ಬಾರಿಗೆ ಯಾವುದೇ ತಪ್ಪಿಲ್ಲದಂತೆ ಪಠ್ಯದ ಒಂದು ಇಡೀ ಪ್ಯಾರಾ ಓದಿದ. ಈ ಕುರಿತು ಆತನನ್ನು ನಾನು ಪ್ರಶಂಸಿಸಿದಾಗ ಆತನ ಮುಖದಲ್ಲಿ ಮಂದಹಾಸ ಮೂಡಿತು.

- ದಯಾನಂದನ ಗಮನ ತರಗತಿ ಕೋಣೆಯ ಹೊರಗೆ ಇತ್ತು ಮುಂದಿನ ಬಾರಿ ಆತನ ಕುರಿತು ಮತ್ತಷ್ಟು ಗಮನಹರಿಸಬೇಕು ಎಂದೆಲ್ಲಾ ಬರೆದದ್ದು ಕಂಡಿತು.

ಪುಟದ ಕೊನೆಯಲ್ಲಿ ತನ್ನ ಹೆಸರನ್ನು ಕಂಡ ಬಾಲಕ ಕಾತರದಿಂದ ಓದಲ ಆರಂಭಿಸಿದ.



- ಮಹಾಂತೇಶ ಇಂದು ಯಾರಿಗೋ ಕಾಯುತ್ತಿರುವ ನೆವದಿಂದ ಶಾಲೆಯಲ್ಲಿಯೇ ಉಳಿದುಕೊಳ್ಳುತ್ತಿದ್ದಾನೆ... ಆತನ ಕುತೂಹಲ ಮೇರೆ ಮೀರಿದೆ... ನಿಜವಾಗಿ ಯೂ ಇದು ಒಳ್ಳೆಯ ತೆರೆದುಕೊಳ್ಳುವಿಕೆ ಮುಂದಿನ ದಿನಗಳಲ್ಲಿ ಆತನ ಕುರಿತು ಇನ್ನಷ್ಟು ಕಾಳಜಿ ವಹಿಸಬೇಕು ಎಂಬ ಬರಹವನ್ನು ನೋಡಿ ಬಾಲಕ ಉಗುಳು ನುಂಗಿಕೊಂಡ. ಅರೆ! ನಾನು ಬೇಕೆಂದೆ ತರಗತಿಯ ಕೋಣೆಯಲ್ಲಿ ಉಳಿದುಕೊಂಡಿದ್ದು ಈ ಶಿಕ್ಷಕರಿಗೆ ಹೇಗೆ ಗೊತ್ತಾಯ್ತು ಎಂದು ಆತನಿಗೆ ಸೋಜಿಗವಾಯಿತು. ಗುರುಗಳು ತನ್ನನ್ನು ಗಮನಿಸುತ್ತಿದ್ದಾರೆ ಎಂಬುದೇ ಆತನ ಸಂತಸಕ್ಕೆ ಕಾರಣವಾಯಿತು.

ನೀನು ಇದನ್ನು ಓದಿದೆಯಾ? ಎಂಬ ದನಿ ಕೇಳಿ ಆತ ಹಿಂದೆ ತಿರುಗಿ ನೋಡಿದ. ಅಲ್ಲಿ ಶಿಕ್ಷಕರು ನಸುನಗುತ್ತಾ ನಿಂತಿದ್ದರು. ನಿಧಾನವಾಗಿ ಪುಸ್ತಕವನ್ನು ಮುಚ್ಚುತ್ತಾ ಈ ರೀತಿ ಪ್ರತಿದಿನ ಮಕ್ಕಳ ಕುರಿತು ನಾನು ಕೆಲವು ವಿಷಯಗಳನ್ನು ಬರೆಯುತ್ತೇ... ಎಲ್ಲವನ್ನು ಕಡ್ಡಾಯವಾಗಿ ನೆನಪಿನಲ್ಲಿ ಇಟ್ಟುಕೊಳ್ಳಬೇಕು ಎಂದು ನಾನು ಬಯಸುತ್ತೇನೆ ಅದು ಮರೆತು ಹೋಗಬಾರದು ಎಂಬ ಕಾರಣಕ್ಕಾಗಿ ಹೀಗೆ ಬರೆಯುತ್ತೇನೆ ಎಂದು ಹೇಳಿ ಅವರು ತಮ್ಮ ಮಾತನ್ನು ನಿಲ್ಲಿಸಿದರು.

ಮತ್ತೆ ಮುಂದುವರಿಸಿ ಹೀಗೆ ಮಕ್ಕಳ ಕಡೆ ಗಮನವಿಟ್ಟು ಅವರ ಅಭ್ಯಾಸಗಳನ್ನು ನಾವು ನೋಡಿದಾಗ ಅವರ ಕುರಿತು ಹೆಚ್ಚಿನ ಮಾಹಿತಿ ದೊರೆಯುತ್ತದೆ. ಎಷ್ಟೋ ಬಾರಿ ಕೆಲವರು ಎಲ್ಲ ಗೊತ್ತಿದ್ದು ಉತ್ತರ ಹೇಳಲು ಹಿಂಜರಿಯುತ್ತಾರೆ, ಆಟ ಪಾಠಗಳಲ್ಲಿ ಭಾಗವಹಿಸುವುದಿಲ್ಲ ಪಠ್ಯೇತರ ಚಟುವಟಿಕೆಗಳಿಂದ ದೂರವೇ ಉಳಿಯುತ್ತಾರೆ ಮತ್ತೆ ಕೆಲ ಮಕ್ಕಳು ಕೀಟಲೆ ಮಾಡಿಯೂ ಏನೂ ಗೊತ್ತಿಲ್ಲದ ಮಳ್ಳರಂತೆ ಸುಮ್ಮನೆ ಕುಳಿತುಕೊಳ್ಳುತ್ತಾರೆ. ಮತ್ತೆ ಕೆಲವೊಮ್ಮೆ ಅವರನ್ನು ಪ್ರೀತಿಯಿಂದ ಮಾತನಾಡಿಸಿದಾಗ ನಿಧಾನವಾಗಿ ಎಲ್ಲರೊಂದಿಗೆ ಬೆರೆಯಲು ಆರಂಭಿಸುತ್ತಾರೆ ಎಂದು ತನಗೆ ತಾನೆ ಹೇಳಿಕೊಳ್ಳುವಂತೆ ಶಿಕ್ಷಕರು ಮುಂದುವರೆಸಿದರು.

ನಮ್ಮಂತಹ ಶಿಕ್ಷಕರು ಬಹಳಷ್ಟು ಬಾರಿ ಮಕ್ಕಳು ಕೇವಲ ಕಲಿಯಲು ಶಾಲೆಗೆ ಬರುತ್ತಾರೆ ಎಂದು ಭಾವಿಸುತ್ತೇವೆ. ಆದರೆ ಎಷ್ಟೋ ಬಾರಿ ಮಕ್ಕಳು ಬಾಯಿಂದ ಹೇಳಲು ಸಾಧ್ಯವಾಗದ ಎಷ್ಟೋ ವಿಷಯಗಳನ್ನು ತಮ್ಮ ತಲೆಯಲ್ಲಿ ತುರುಕಿಕೊಂಡು ತರಗತಿಯ ಕೋಣೆಯಲ್ಲಿ ಬಂದು ಕುಳಿತಿರುತ್ತಾರೆ. ಅಂತಹ ಮಕ್ಕಳ ಭಾವನೆಗಲನ್ನು ಅವರು ಹೇಳದೆಯೇ ಅರಿತುಕೊಂಡು ಅವುಗಳಿಗೆ ಪರಿಹಾರ ಹುಡುಕುವುದು ಶಿಕ್ಷಕರಾದ ನಮ್ಮ ಕರ್ತವ್ಯ... ನೀನೇನಂತಿಯ? ಎಂದು ಹೇಳಿ ಆ ಬಾಲಕನ ಬೆನ್ನು ತಟ್ಟಿ ಪ್ರಶ್ನಾರ್ಥಕವಾಗಿ ನೋಡಿದರು.

ಶಾಲೆಯ ಯಾವುದೇ ಪಠ್ಯ ಪುಸ್ತಕದಲ್ಲಿಯೂ ಆ ಪಾಠ ಇರಲಿಲ್ಲವಾದರೂ ಆ ಬಾಲಕನಿಗೆ ಕಲಿಸದೆಯೇ ಒಂದು ಹೊಸ ಪಾಠದ ಅರಿವಾಯಿತು. ಕಲಿಕೆ ಎಂಬದು ತರಗತಿ ಕೋಣೆಯಲ್ಲಿ ಮಾತ್ರವಲ್ಲ. ಪಠ್ಯದ ವಿವರಣೆ ಕೊಡುವುದು ಮಾತ್ರ ಕಲಿಕೆಯಲ್ಲ, ಪರೀಕ್ಷೆಯನ್ನು ತೆಗೆದುಕೊಂಡು ಮಕ್ಕಳ ಉತ್ತರಗಳಿಗೆ ಅಂಕಗಳನ್ನು ಕೊಡುವುದು ಕೂಡ ಕಲಿಕೆಯ ಭಾಗವಲ್ಲ. ನಿಜವಾದ ಕಲಿಕೆ ಮಕ್ಕಳ ಮೇಲೆ ಗಮನವಿಟ್ಟು ಅವರ ಮಾತುಗಳನ್ನು ಹೆಚ್ಚು ಆಲಿಸುವುದು ಅದರಲ್ಲೂ ಅವರು ಹೇಳುವ ಮಾತಿಗಿಂತ ಹೇಳದೆ ಉಳಿಸಿದ ಮಾತುಗಳನ್ನು ಅರಿತುಕೊಳ್ಳುವುದು ಕಲಿಸುವಿಕೆಯ ಒಂದು ಭಾಗ ಎಂಬುದು ಆ ಬಾಲಕನಿಗೆ ಮನದಟ್ಟಾಯಿತು.

ಹೌದಲ್ವೆ ಸ್ನೇಹಿತರೆ? ಮೇಲಿನ ಈ ಕಥೆಯ ಸಾರ ನೂರು ಪ್ರತಿಶತ ನಿಜ. ಪ್ರತಿಯೊಂದು ಮಗುವಿನಲ್ಲೂ ಒಂದು ಕಥೆ ಇರುತ್ತದೆ. ಎಲ್ಲ ಮಕ್ಕಳು ಕೂಡ ತಮ್ಮದೇ ಆದ ಸಮಸ್ಯೆಗಳೊಂದಿಗೆ ಒದ್ದಾಡುತ್ತಿರುತ್ತಾರೆ. ಎಷ್ಟೋ ಬಾರಿ ಅವರ ಮಾತುಗಳನ್ನು ಅಯ್ಯೋ! ಸಣ್ಣ ಮಕ್ಕಳು ಅವರಿಗೇನು ತಿಳಿಯುತ್ತೆ ಎಂದು ಹೇಳುವ ಮೂಲಕ ಕೇಳಿಸಿಕೊಳ್ಳದೆ ಹೋಗುವ ಪಾಲಕರು ಮತ್ತು ಶಿಕ್ಷಕರ ನಡುವೆ ನಮ್ಮ ಕಥೆಯ ಶಿಕ್ಷಕ ವಿಭಿನ್ನವಾಗಿ ಕಾಣುತ್ತಾನೆ.

ಶಿಕ್ಷಕರು ಇರಬೇಕಾಗಿರುವುದು ಹಾಗೆಯೇ. ಮಕ್ಕಳು ಹೇಳಿಕೊಳ್ಳುವ ಭಾವನೆಗಳಿಗಿಂತ ಅವರ ಹೇಳದೆ ಉಳಿದ ಮಾತುಗಳಲ್ಲಿ ಅವರ ಮುಂದಿನ ಬದುಕಿನ, ಭವಿಷ್ಯದ ಮುನ್ನುಡಿ ಅಡಗಿರುತ್ತದೆ. ಅವರ ನಾಡಿಮಿಡಿತವನ್ನು ಅರಿತು ಸೂಕ್ತ ಸಮಯದಲ್ಲಿ ತಪ್ಪು ಸರಿಗಳ ಅರಿವನ್ನು ಮೂಡಿಸಿ ಉತ್ತಮ ಮಾರ್ಗದಲ್ಲಿ ಚಲಿಸಲು ಪ್ರೋತ್ಸಾಹಿಸುವ ಮೂಲಕ ಮಕ್ಕಳನ್ನು ಭವಿಷ್ಯದ ನಾಗರಿಕರನ್ನಾಗಿ ರೂಪಿಸುವ ಶಿಕ್ಷಕರು ಪ್ರಸ್ತುತ ಜೀವನದ ಅವಶ್ಯಕತೆ.

ಅಂತಹ ಶಿಕ್ಷಕರ ಸಂಖ್ಯೆ ಇನ್ನೂ ಹೆಚ್ಚಾಗಲಿ ಎಂಬ ಹಾರೈಸುವ

**- ವೀಣಾ ಹೇಮಂತ್** ಗೌಡ ಪಾಟೀಲ್

# ಮುಂದಿನ ಪೀಳಿಗೆಗೆ ಅಂಬೇಡ್ಕರ್ ತತ್ವಾದರ್ಶ ಮುಖ್ಯ

• ಪ್ರಜೋದಯ ವರದಿ



**ಹಾಸನ:** ಸಂವಿಧಾನ ಪುಸ್ತಕವನ್ನು ಪಡೆದುಕೊಳ್ಳುವುದಷ್ಟೇ ಅಲ್ಲದೆ ಅಂಬೇಡ್ಕರ್ ಅವರು ಅದರಲ್ಲಿ ಹಾಕಿ ಕೊಟ್ಟಿರುವಂತಹ ಅಂಶಗಳನ್ನು ತಿಳಿದುಕೊಳ್ಳುವ ಕೆಲಸ ಮಾಡಬೇಕು. ಜೊತೆಗೆ ಮುಂದಿನ ಪೀಳಿಗೆಗೆ ಅವುಗಳ ಕುರಿತಾಗಿ ಮಾಹಿತಿ ತಿಳಿಸುವ ಕೆಲಸವನ್ನು ಮಾಡುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸೋಮವಾರ ಆಯೋಜಿಸಿದ್ದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರ ಕೊಡುಗೆಯಿಂದ ನಾವೆಲ್ಲರೂ ಇಂದು ಸ್ವತಂತ್ರರಾಗಿದ್ದೇವೆ. ಪ್ರಜೆಗಳು ಇಂದು ಎಲ್ಲಾ ಕ್ಷೇತ್ರದಲ್ಲಿ, ರಂಗದಲ್ಲಿಯೂ ಭಾಗವಹಿಸುತ್ತಿರುವುದರ ಸಂಕೇತ ಪ್ರಜಾಪ್ರಭುತ್ವವಾಗಿದೆ. ನಾವೆಲ್ಲರೂ ಇಂದು ಶಾಸಕರು, ಸಂಸದರಾಗಿದ್ದೇವೆ. ಮುಂಬರುವ ಪೀಳಿಗೆಗೆ ಅವುಗಳ ಕುರಿತ ಮಾಹಿತಿ ನೀಡುವ ಜವಾಬ್ದಾರಿ ಅಧಿಕಾರಿಗಳು, ಚುನಾಯಿತರು, ಅಕ್ಷರಸ್ಥರಾದ ನಮ್ಮೆಲ್ಲರದು ಎಂದರಲ್ಲದೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಹೆಚ್.ಪಿ.ಸ್ವರೂಪ್ ಅವರು, ಸಂವಿಧಾನದಲ್ಲಿರುವ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಡಾ.ಬಿ.ಆರ್. ಅಂಬೇಡ್ಕರ್ ಅವರು ಹಾಕಿ ಕೊಟ್ಟಿರುವಂತಹ ಅಂಶಗಳಾಗಿವೆ. ಚುನಾವಣೆ ಸಂದರ್ಭದಲ್ಲಿ ರೆಸಾರ್ಟ್, ಹೋಟೆಲ್‌ಗಳಿಗೆ ರಜೆಗಳನ್ನು ನೀಡಬೇಕೆಂದು ಸರ್ಕಾರದಿಂದ ಆದೇಶ ಬರುತ್ತದೆ. ಆದರೆ ಜನರು ರಜೆಯನ್ನು ತೆಗೆದುಕೊಂಡು ಪ್ರವಾಸ ಮಾಡಲು ಹೋಗುವಂತಹ ಸ್ಥಿತಿ ಬಂದಿದೆ. ಹಾಗಾಗಿ ರಾಷ್ಟ್ರದ ಕಟ್ಟ ಕಡೆಯ ವ್ಯಕ್ತಿಗೂ ನಮ್ಮ ಸಂವಿಧಾನದ ಹಕ್ಕುಗಳು ಸೌಲಭ್ಯಗಳು ಸಿಗಬೇಕೆಂದು ಹೇಳಿದರು.

ಪ್ರಸ್ತುತವಾಗಿ ಪ್ರಪಂಚದ ವಿವಿಧ ದೇಶಗಳಲ್ಲಿ ರಾಜಕೀಯ ಅವ್ಯವಸ್ಥೆಗಳನ್ನು ಕಾಣುತ್ತಿದ್ದೇವೆ. ಸಂವಿಧಾನವನ್ನು ರಚಿಸಿರುವ ಡಾ. ಬಿ.ಆರ್.ಅಂಬೇಡ್ಕರ್ ಅವರಿಗೆ ನಾವೆಲ್ಲರೂ ಗೌರವವನ್ನು ಕೊಡುವ ಮೂಲಕ ಸಂವಿಧಾನವನ್ನು ಉಳಿಸಬೇಕು ಮತ್ತು ಮುಂದಿನ ಪೀಳಿಗೆಗೆ ಪ್ರಜಾಪ್ರಭುತ್ವದ ಹಕ್ಕುಗಳ ಕುರಿತಾಗಿ ತಿಳಿಸಬೇಕು ಎಂದರು.

ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಮಾತನಾಡಿ, ಪ್ರಜಾಪ್ರಭುತ್ವ ನಮ್ಮ ದೇಶದ ಜೀವಾಳವಾಗಿದೆ. ಅದು ಸಂವಿಧಾನದ ಮೂಲಕ ನಮಗೆ ದೊರೆತಿದೆ. ಪ್ರತಿಯೊಬ್ಬರು ಆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಅದನ್ನು ಮತ ಚಲಾಯಿಸುವ ಮೂಲಕ ಉಳಿಸಬೇಕು. ಮತ ಚಲಾಯಿಸಲು ನಿರ್ಲಕ್ಷ ಮಾಡಬಾರದು. ಪ್ರಜಾಪ್ರಭುತ್ವ ಸದೃಢವಾಗಬೇಕೆಂದರೆ ಪ್ರತಿಯೊಬ್ಬರು ಮತವನ್ನು ಚಲಾಯಿಸಬೇಕು. ಕಡ್ಡಾಯವಾಗಿ ನಾನು ಮತ ಚಲಾಯಿಸುತ್ತೇನೆ ಮತ್ತು ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತೇನೆಂದು ಸಂಕಲ್ಪ ಮಾಡಬೇಕು. ಸಂವಿಧಾನದಲ್ಲಿ ನೀಡಿರುವ ಅಂಶಗಳಲ್ಲಿ ಸಮಾನತೆ ಎಂಬುದು ವಿಶಿಷ್ಟವಾದದ್ದಾಗಿದೆ. ಯಾವುದೇ ರೀತಿಯ ಜಾತಿ, ಲಿಂಗ ತಾರತಮ್ಯವಿಲ್ಲದೆ ಎಲ್ಲರೂ ಸಮಾನರು ಎಂಬ ಸಂದೇಶವನ್ನು ಸಾರಿರುವುದು ವಿಶಿಷ್ಟವಾದದ್ದಾಗಿದೆ ಎಂದರು.

ಹೊಳೆನರಸೀಪುರದ ಇತಿಹಾಸ ವಿಷಯದ ನಿವೃತ್ತ ಪ್ರಾಧ್ಯಾಪಕ ಗಿರೀಶ್ ಅವರು ಮಾತನಾಡಿ, ಬೇರು ಮಟ್ಟದಿಂದ ಬಂದಂತಹ ಸಹ ಸಹೃದಯಿ ಅಂಬೇಡ್ಕರ್‌ರವರು ಕಟ್ಟಿಕೊಟ್ಟಿರುವಂತಹ ಪ್ರಜಾಪ್ರಭುತ್ವ ಇಂದು ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಸುಮಾರು 100 ರಿಂದ 106 ದೇಶಗಳಲ್ಲಿ ವಿಜೃಂಭಿಸುತ್ತಿದೆ ಎಂದರು.

ಅಬ್ರಾಂ ಲಿಂಕನ್, ಹಮ್ಮೂರಬಿ ವಿಸಂಹಿತೆ, ಗ್ರೀಕ್ ದೇಶದ ಪ್ರತ್ಯಕ್ಷ ಪ್ರಜಾಪ್ರಭುತ್ವ, ಕ್ರೈಸ್ತನೀಸ್ ರೋಮ್ ಸಾಮ್ರಾಜ್ಯದಲ್ಲಿ ಪ್ರತಿಪಾದನೆ ಮಾಡಿದ ಪ್ರಜಾಪ್ರಭುತ್ವದ ತತ್ವ, ಜಸ್ಟಿನಿಯನ್ ಕಾನೂನು, ನೆಪೋಲಿಯನ್ ಬೋನಾಪಾರ್ಟೆ ಅವರ ಕುರಿತು ಮತ್ತು ಪ್ರಜಾಪ್ರಭುತ್ವ ಬೆಳೆದು ಬಂದ ಹಂತದ ಕುರಿತಾಗಿ ಅದರ ಇತಿಹಾಸವನ್ನು ವಿವರಿಸಿದರು.

ನಿಜವಾದ ಪ್ರಜಾಪ್ರಭುತ್ವವನ್ನು ಚೋಳರ ಕಾಲದಲ್ಲಿ ನಾವು ನೋಡಬಹುದು. ಅಂಬೇಡ್ಕರ್‌ರವರು 18 ರಾಷ್ಟ್ರಗಳ ಸಂವಿಧಾನವನ್ನು ಅಧ್ಯಯನ ಮಾಡಿದವರಾಗಿದ್ದು, 4 ಡಾಕ್ಟರೇಟ್ ಪದವಿಗಳನ್ನು 64 ಡಿಗ್ರಿ ಪದವಿಗಳನ್ನು ಪಡೆದವರಾಗಿದ್ದಾರೆ. ಅವರನ್ನು ನೆಹರು, ಗಾಂಧೀಜಿ ಅಂತಹ ರಾಷ್ಟ್ರೀಯ ನೇತಾರರು ಸಂವಿಧಾನವನ್ನು ರಚಿಸಲು ಆಯ್ಕೆಯನ್ನು ಮಾಡಿದರು. ನಂತರ ಅಂಬೇಡ್ಕರ್ ಅವರು ಕರಡು ಸಮಿತಿಯ ಅಧ್ಯಕ್ಷರಾಗಿ ಸಂವಿಧಾನವನ್ನು ಸಿದ್ಧತೆ ಮಾಡಲು ಆರಂಭಿಸಿದವರಾಗಿದ್ದಾರೆ. ಅತ್ಯಂತ ಕಡಿಮೆ ದೋಷವಿರುವ ಪ್ರಜಾಪ್ರಭುತ್ವ ನಮ್ಮದಾಗಿದೆಂದು ತಿಳಿಸಿದರು.

ಪ್ರಜಾಪ್ರಭುತ್ವದ ಕುರಿತಾಗಿ ಜಾಗೃತಿ ಮೂಡಿಸಲು 10 ನಿಮಿಷಗಳ ಸಮಯವನ್ನು ಸದ್ವಿನಿಯೋಗ ಮಾಡಿದರೆ ಅದು ನಾವು ಪ್ರಜಾಪ್ರಭುತ್ವಕ್ಕೆ ಕೊಡುವ ಅತ್ಯಂತ ಶ್ರೇಷ್ಠ ಕೊಡುಗೆಯಾಗಿದೆ. ಇದನ್ನು ಅರ್ಥ ಮಾಡಿಸುವುದೇ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಮೂಲ ಉದ್ದೇಶ. ಪ್ರಜಾಪ್ರಭುತ್ವಕ್ಕೆ ಎಲ್ಲಿಯೂ ತೊಂದರೆಗಳಾಗದಂತೆ ನೋಡಿಕೊಳ್ಳಲು ಸುಪ್ರೀಂ ಕೋರ್ಟ್ ಕೂಡ ಇದೆ. ಹಾಗಾಗಿ ಎಲ್ಲರೂ ಮತವನ್ನು ಚಲಾಯಿಸಿ ಜೊತೆಗೆ ನಿಮ್ಮ ಸ್ನೇಹಿತರಿಗೆ ಅಕ್ಕಪಕ್ಕದ ಮನೆಯವರಿಗೆ ಮತದಾನದ ಕುರಿತಾಗಿ ಜಾಗೃತಿಯನ್ನು ಮೂಡಿಸಿ ಎಂದು ಮತದಾನದ ಜಾಗೃತಿ ಕುರಿತಾಗಿ ಸವಿವರವಾಗಿ ಉಪನ್ಯಾಸ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಅವರು ಸಂವಿಧಾನದ ಪೀಠಿಕೆಯನ್ನು ಬೋಧಿಸಿದರು. ಸಮಾಜ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಮುದಾಯದ ಮುಖಂಡರಾದ ಸಂದೇಶ್, ಈರಣ್ಣ ಉಪಸ್ಥಿತರಿದ್ದರು. ವಿವಿಧ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು, ಅಧಿಕಾರಿಗಳು ಮತ್ತಿತರರು ಭಾಗವಹಿಸಿದ್ದರು.

## ಮೃತರ ಕುಟುಂಬಸ್ಥರಿಗೆ ನಿಶ್ಚಲಾನಂದನಾಥಶ್ರೀ ಸಾಂತ್ವನ



• ಪ್ರಜೋದಯ ವರದಿ

**ಹಾಸನ:** ಮೊಸಳೆಹೊಸಳ್ಳಿಯಲ್ಲಿ ಟ್ರಕ್ ಹರಿದು ಮೃತಪಟ್ಟವರ ಮನೆಗಳಿಗೆ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀನಿಶ್ಚಲಾನಂದನಾಥ ಸ್ವಾಮೀಜಿ ಅವರು ಭೇಟಿ ನೀಡಿ ಸಾಂತ್ವನ ಹೇಳಿದರು.

ಹೊಳೆನರಸೀಪುರ ತಾಲ್ಲೂಕಿನ ಕಬ್ಬಿನಹಳ್ಳಿ ಗ್ರಾಮದ ಪ್ರವೀಣ್, ಕುಮಾರ್ ಕುಟುಂಬಸ್ಥರಿಗೆ ಸಾಂತ್ವನ ಹೇಳಿದ ಬಳಿಕ ಮಾತನಾಡಿದ ಅವರು, ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಮೊಸಳೆ ಹೊಸಳ್ಳಿ ಬಳಿ ನಡೆದ ಅಪಘಾತದಲ್ಲಿ 10 ಜನರು ಮೃತಪಟ್ಟಿರುವುದು ದುರ್ದೈವದ ಸಂಗತಿ. ರಾಜ್ಯ ಹಾಗು ಕೇಂದ್ರ ಸರ್ಕಾರಗಳು ಮೃತರ ಕುಟುಂಬಸ್ಥರಿಗೆ ಹೆಚ್ಚಿನ ಪರಿಹಾರ ನೀಡುವಂತೆ ಒತ್ತಾಯಿಸಿದರು.

ಈ ಪ್ರಕರಣವನ್ನು ಸರ್ಕಾರ ವಿಶೇಷವಾಗಿ ಪರಿಗಣಿಸಬೇಕು. ಮೃತಪಟ್ಟಿರುವವರು 25 ವರ್ಷದೊಳಗಿನ ಯುವಕರು. ಮೃತರ ಕುಟುಂಬಕ್ಕೆ ಸರ್ಕಾರ ವಿಶೇಷ ಸೌಲಭ್ಯ ಕಲ್ಪಿಸಲು ಸರ್ಕಾರ ತಹಶೀಲ್ದಾರ್‌ಗಳಿಗೆ ಸೂಚನೆ ನೀಡಿ, ವಸತಿ ಸೇರಿ ಇನ್ನಿತರೆ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರೆ ಅನುಕೂಲವಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಮೃತರ ಕುಟುಂಬಕ್ಕೆ ಬೆನ್ನೆಲುಬಾಗಿ ನಿಂತು ಕೆಲಸ ಮಾಡಿರುವುದನ್ನು ನಾವು ಸ್ಮರಿಸುತ್ತೇವೆ. ಮಕ್ಕಳನ್ನು ಕಳೆದುಕೊಂಡಿರುವ ಕುಟುಂಬಸ್ಥರು ಬಡವಾಗಿರುವುದರಿಂದ ಜಿಲ್ಲಾಡಳಿತದ ಮೂಲಕ ವಿಶೇಷ ಸೌಲಭ್ಯ ಕಲ್ಪಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುವುದಾಗಿ ಹೇಳಿದರು.

## ಖಾಲಿ ನಿವೇಶನದಲ್ಲಿ ಬೆಳೆದಿದ್ದ 1 ಕೆ.ಜಿ. ಗಾಂಜಾ ವಶ



• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಅಕ್ರಮ ಗಾಂಜಾ ಮಾರಾಟ ಹಾಗು ಸೇವನೆ ಪ್ರಕರಣಗಳು ವರದಿಯಾಗುತ್ತಲೇ ಇದ್ದು, ನಗರದ ಕೆ.ಆರ್.ಪುರಂ 7ನೇ ಅಡ್ಡ ರಸ್ತೆಯ ಖಾಲಿ ನಿವೇಶನವೊಂದರಲ್ಲಿ ಗಾಂಜಾ ಗಿಡ ಬೆಳೆದಿರುವ ಪ್ರಕರಣ ಸೋಮವಾರ ಬೆಳಕಿಗೆ ಬಂದಿದೆ.

ನಿವೃತ್ತ ಶಿಕ್ಷಕ ಅಣ್ಣಯ್ಯ ಎಂಬುವವರ ಖಾಲಿ ನಿವೇಶನದಲ್ಲಿ ಬೆಳೆದಿದ್ದ 1 ಕೆ.ಜಿ. ತೂಕದ 5 ಗಾಂಜಾ ಗಿಡಗಳನ್ನು ಅಬಕಾರಿ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಬೆಂಗಳೂರಿನಲ್ಲಿ ವಾಸವಿರುವ ಅಣ್ಣಯ್ಯ ಅವರು ಆರು ತಿಂಗಳ ಹಿಂದೆ ತಮ್ಮ ಖಾಲಿ ಜಾಗದಲ್ಲಿ ಬೆಳೆದಿದ್ದ ಗಿಡಗಂಟಿ ಸ್ವಚ್ಛಗೊಳಿಸಿದ್ದರು. ನಿರಂತರ ಮಳೆಯಿಂದ ಮತ್ತೆ ಪಾರ್ಥೇನಿಯಂ ಸೇರಿ ವಿವಿಧ ಗಿಡಗಂಟಿ ಬೆಳೆದಿತ್ತು. ಅದನ್ನೇ ಅವಕಾಶವಾಗಿ ಬಳಸಿಕೊಂಡ ವ್ಯಸನಿಗಳು ಅಲ್ಲಿ ಗಾಂಜಾ ಬೀಜ ಎಸೆದಿದ್ದರು. ಪಾರ್ಥೇನಿಯಂ ಗಿಡಗಳ ಜೊತೆಗೆ ಹಲುಸಾಗಿ ಬೆಳೆದಿದ್ದು ಯಾರಿಗೂ ಸಂಶಯ ಬಂದಿರಲಿಲ್ಲ. ಸೋಮವಾರ ವ್ಯಕ್ತಿಯೊಬ್ಬರ ಕಣ್ಣಿಗೆ ಗಾಂಜಾ ಗಿಡಗಳು ಕಂಡಿವೆ. ಅವರು ಮಹಾನಗರಪಾಲಿಕೆ ಪೌರಾಯುಕ್ತ ಆರ್.ಕೃಷ್ಣಮೂರ್ತಿ ಅವರಿಗೆ ಮಾಹಿತಿ ನೀಡಿದ್ದು, ಪೌರ ಕಾರ್ಮಿಕರು ಪರಿಶೀಲಿಸಿ ಗಾಂಜಾ ಗಿಡ ಎಂಬುದನ್ನು ದೃಢಪಡಿಸಿದ್ದಾರೆ.

ನಂತರ ಅಬಕಾರಿ ಉಪಾಧೀಕ್ಷಕ ಎಂ.ಹೆಚ್. ರಘು, ಸಿಬ್ಬಂದಿ ಪ್ರಮೀಳಾ ಮತ್ತಿತರರು ಮಹಜರು ನಡೆಸಿ ಗಾಂಜಾ ಗಿಡಗಳನ್ನು ಕಿತ್ತು ರಾಸಾಯನಿಕ ಮಾದರಿ ಪರೀಕ್ಷೆಗೆ ಕಳುಹಿಸಿಕೊಟ್ಟರು.

**ಹೆಚ್ಚುತ್ತಿರುವ ಪ್ರಕರಣ**

ಜಿಲ್ಲೆಯಲ್ಲಿ ಗಾಂಜಾ ಘಮಲು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ವಾರದ ಹಿಂದಷ್ಟೇ ಸತ್ಯಮಂಗಲ ಬಡಾವಣೆಯ ಖಾಲಿ ನಿವೇಶನದಲ್ಲಿ ಗಾಂಜಾ ಗಿಡಗಳು ಪತ್ತೆಯಾಗಿವೆ. ಶಾಂತಿಗ್ರಾಮದಲ್ಲೂ ಅಕ್ರಮವಾಗಿ ಗಾಂಜಾ ಸಾಗಾಟ ಮಾಡುತ್ತಿದ್ದ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

## ನಾಳೆ ನಗರದಲ್ಲಿ ವಿಶ್ವಕರ್ಮ ಜಯಂತಿ



• ಪ್ರಜೋದಯ ವರದಿ

**ಹಾಸನ:** ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸೆ.17ರ ಬುಧವಾರ ಜಿಲ್ಲಾ ವಿಶ್ವಕರ್ಮ ಸಮಾಜ ಹಾಗು ಜಿಲ್ಲಾಡಳಿತ ವತಿಯಿಂದ ವಿಶ್ವಕರ್ಮ ಜಯಂತಿ ಏರ್ಪಡಿಸಲಾಗಿದೆ ಎಂದು ಜಿಲ್ಲಾ ವಿಶ್ವಕರ್ಮ ಸಮಾಜ ಅಧ್ಯಕ್ಷ ಹೆಚ್.ವಿ.ಹರೀಶ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಪ್ರತಿವರ್ಷ ಸಾವಿರಾರು ವಿಶ್ವಕರ್ಮ ಸಮಾಜ ಬಾಂಧವರು ಭಾಗವಹಿಸುವ ಕಾರ್ಯಕ್ರಮವನ್ನು ಈ ಬಾರಿಯೂ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಸಮಾಜದ ಸಾಂಸ್ಕೃತಿಕ ಶಕ್ತಿ, ಪರಂಪರೆ ಮತ್ತು ಏಕತೆ ತೋರಿಸುವ ಮಹೋತ್ಸವ ಇದಾಗಿದೆ ಎಂದು ಹೇಳಿದರು.

ಅಂದು ಬೆಳಿಗ್ಗೆ 8 ಗಂಟೆಗೆ ಅರೆಮಾದನಹಳ್ಳಿ ಮಠದ ಶ್ರೀ ಶಿವ ಸುಜ್ಞಾನ ತೀರ್ಥ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಕ್ಷೇತ್ರ ಕಾಳಿಕಾಂಬ ಕಮಠೇಶ್ವರ ದೇವಾಲಯದಲ್ಲಿ ವಿಶ್ವಕರ್ಮ ಹೋಮ. ಬೆಳಿಗ್ಗೆ 9.30ಕ್ಕೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ವಿಶ್ವಕರ್ಮರ ಭಾವಚಿತ್ರಕ್ಕೆ ಪುಷ್ಪಾರ್ಚನೆ, ನಂತರ ವಿಶ್ವಕರ್ಮ ವೃತ್ತದಿಂದ ಕಲಾಕ್ಷೇತ್ರದ ವರೆಗೆ ಮೆರವಣಿಗೆ, ಬೆಳಿಗ್ಗೆ 11.30ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದರು.

ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಭಾಗವಹಿಸುವರು. ವಿಶ್ವಕರ್ಮ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ. ಮಧ್ಯಾಹ್ನ 2 ಗಂಟೆಗೆ ಪ್ರೊ. ಕೃಷ್ಣೇಗೌಡ ಅವರಿಂದ ನಗೆಹಬ್ಬ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

ವಿಶ್ವಕರ್ಮ ಸಮಾಜ ಜಿಲ್ಲಾ ಉಪಾಧ್ಯಕ್ಷ ಎ.ಸಿ.ನಾರಾಯಣ್, ಪ್ರಧಾನ ಕಾರ್ಯದರ್ಶಿ ಕೆ. ರಾಘವೇಂದ್ರ ಕುಮಾರ್, ಉಪಾಧ್ಯಕ್ಷ ಕೆ.ವಿ.ಯೋಗೀಶ್, ತಾಲ್ಲೂಕು ಉಪಾಧ್ಯಕ್ಷ ಬ್ಯಾಟರಂಗಚಾರ್, ಖಜಾಂಚಿ ಕೆ.ಎಸ್.ಜಗದೀಶ್ ಇದ್ದರು.

## ಅಪಘಾತ ವಲಯಗಳಲ್ಲಿ ಸೂಚನಾ ಫಲಕ ಕಡ್ಡಾಯಗೊಳಿಸಿ

» ಮೊದಲನೇ ಪುಟದಿಂದ

ಅಪಘಾತಗಳ ತಡೆಗಟ್ಟುವ ನಿಟ್ಟಿನಲ್ಲಿ ತಹಶೀಲ್ದಾರ್‌ಗಳು ಮುತುವರ್ಜಿ ವಹಿಸಬೇಕೆಂದು ಹೇಳಿದರು.

ನಗರ, ಪಟ್ಟಣ, ಗ್ರಾಮೀಣ ಪ್ರದೇಶಗಳಲ್ಲಿ ಹಾದು ಹೋಗಿರುವ ರಾಜ್ಯ ಹೆದ್ದಾರಿ ಹಾಗು ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ ಸ್ಥಳೀಯವಾಗಿ ಪರಿಶೀಲಿಸಿ, ಅಪಘಾತ ತಡೆಯುವ ನಿಟ್ಟಿನಲ್ಲಿ ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಪರಿಶೀಲನೆ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿ ರಚನೆ ಮಾಡುವಂತೆ ಸೂಚಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಟ್ರ್ಯಾಕ್ಟರ್‌ಗಳಿಗೆ ರೇಡಿಯನ್ ಟ್ರಿಪ್ ಅಳವಡಿಸಲು ಕ್ರಮವಹಿಸುವುದರ ಜೊತೆಗೆ ಜನಸಂದಣಿ ಇರುವ ಪ್ರದೇಶಗಳಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಬೇಕು. ರಸ್ತೆ ಸುರಕ್ಷತೆ ಎಂದರೆ ರಸ್ತೆಗಳ ಗುಂಡಿ ಮುಚ್ಚುವುದು ಮಾತ್ರವಲ್ಲ, ವಾಹನ ಚಾಲನೆ ಒಂದು ಕೌಶಲ. ಅದರ ಬಗ್ಗೆ ಗಮನಹರಿಸಬೇಕೆಂದರು.

ಟೋಲ್ ಪ್ಲಾಜ್ಹಾಗಳಲ್ಲಿ ಬ್ರೆತ್ ಅನಲೈಜರ್ ಮಿಷಿನ್ ಇಡಬೇಕು. ರಾಷ್ಟ್ರೀಯ ಹೆದ್ದಾರಿ-75 ರಲ್ಲಿ ಕಡ್ಡಾಯವಾಗಿ ಬಳಕೆಗೆ 2 ಆ್ಯಂಬುಲೆನ್ಸ್ ಲಭ್ಯವಿರಬೇಕು. ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸುವಂತೆಯೂ ಸಹರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಿದರು.

ಟ್ರಕ್ ಟರ್ಮಿನಲ್ ನಿರ್ಮಾಣಕ್ಕೆ ನಗರ ಹೊರವಲಯದಲ್ಲಿ ಜಾಗ ಗುರುತಿಸಿ, ಶಾಲಾ ವಾಹನ ಚಾಲಕರು ಸಮವಸ್ತ್ರ ಕಡ್ಡಾಯವಾಗಿ ಧರಿಸಬೇಕು. ವಾಹನ ಪರವಾನಗಿ ಹೊಂದಿರಬೇಕು. ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದರು.

**ಪಾರ್ಕಿಂಗ್ ಜಾಗ ಅನ್ಯ ಉದ್ದೇಶಕ್ಕೆ ಬಳಕೆ**

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರು ಮಾತನಾಡಿ, ರಾತ್ರಿ 9.30ರ ನಂತರ ಬೀದಿ ದೀಪಗಳು ಇಲ್ಲದಿರುವುದು, ಅವೈಜ್ಞಾನಿಕವಾಗಿ ರಸ್ತೆಗಳಿಗೆ ಹಂಪ್ಸ್ ಅಳವಡಿಸುವುದು ಅಪಘಾತ ಸಂಭವಿಸಲು ಕಾರಣವಾಗುತ್ತಿದೆ. ಲೋಪ ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸದಿದ್ದರೆ ವ್ಯಾಪ್ತಿಯ ಸಂಬಂಧಪಟ್ಟ ಅಧಿಕಾರಿಯ ಮೇಲೆ ಎಫ್‌ಐಆರ್ ದಾಖಲಿಸಲಾಗುತ್ತದೆಂದು ಎಚ್ಚರಿಕೆ ನೀಡಿದರು.

ನಗರ ಪ್ರದೇಶದಲ್ಲಿ ವಾಣಿಜ್ಯ ಮಳಿಗೆಗಳ ಸೆಲ್ಲರ್‌ಗಳನ್ನು ದಾಸ್ತಾನು ಮಾಡಲು ಉಪಯೋಗಿಸಿಕೊಳ್ಳುತ್ತಿದ್ದು, ವಾಹನಗಳನ್ನು ರಸ್ತೆ ಬದಿಯಲ್ಲಿ ನಿಲ್ಲಿಸುತ್ತಿರುವುದರಿಂದ ಸಂಚಾರಕ್ಕೆ ಅಡಚಣೆ ಆಗುತ್ತಿದೆ. ಆದ್ದರಿಂದ ವಾಣಿಜ್ಯ ಮಳಿಗೆ ನಿರ್ಮಾಣಕ್ಕೆ ಪರವಾನಗಿ ನೀಡುವ ಸಂದರ್ಭದಲ್ಲಿ ವಾಹನ ನಿಲುಗಡೆಗೆ ಅಗತ್ಯ ಸ್ಥಳಾವಕಾಶ ಇದೆಯೇ ಎಂಬುದನ್ನು ಪರಿಶಿಲಿಸಿ ನಂತರ ಪರವಾನಗಿ ನೀಡಲು ಕ್ರಮವಹಿಸುವಂತೆ ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಅಪರ ಜಿಲ್ಲಾಧಿಕಾರಿ ಮಂಜುನಾಥ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರರಾದ ಗಿರೀಶ್, ಹಿಮ್ಸ್ ನಿರ್ದೇಶಕ ಡಾ||ರಾಜಣ್ಣ, ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಕಾಶ್, ಮಹಾನಗರ ಪಾಲಿಕೆ ಆಯುಕ್ತ ಆರ್. ಕೃಷ್ಣಮೂರ್ತಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಬಲರಾಮ್ ಇದ್ದರು.

**ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಏರ್ಪಡಿಸಲಾಗಿದ್ದ ಸೈಕಲ್ ಜಾಥಾಕ್ಕೆ ಜಿಲ್ಲಾಧಿಕಾರಿ ಕೆ. ಎಸ್.ಲತಾಕುಮಾರಿ ಅವರು ಸೈಕಲ್ ಚಲಾಯಿಸುವ ಮೂಲಕ ನಗರದಲ್ಲಿ ಸಂಚಾರಿಸಿ ನನ್ನ ಮತ ನನ್ನ ಹಕ್ಕು ಎಂಬುದರ ಕುರಿತು ಜಾಗೃತಿ ಮೂಡಿಸಿದರು.**



**ಬಳಿಕ ಮಾತನಾಡಿದ ಅವರು, ಜಿಲ್ಲೆಯ ಸಮಸ್ತ ಜನತೆಗೂ ಪ್ರಜಾಪ್ರಭುತ್ವ ದಿನಾಚರಣೆ ಶುಭಾಶಯಗಳು. ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಇರುವ ಪ್ರಜಾಪ್ರಭುತ್ವ ವನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಮತ ಚಲಾಯಿಸುವ ಮೂಲಕ ಬಲಪಡಿಸಬೇಕು ಎಂದರು.**

**ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕಾಧಿಕಾರಿ ಬಿ.ಆರ್. ಪೂರ್ಣಿಮಾ ಅವರು ಮಾತನಾಡಿ, ದೇಶವನ್ನು ಅಭಿವೃದ್ಧಿ ರಾಷ್ಟ್ರವನ್ನಾಗಿ ಮುನ್ನಡೆ ಸಲು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತ ಚಲಾಯಿಸಬೇಕೆಂದು ತಿಳಿಸಿದರು. ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ದೂದ್‌ಫಿರ್ ಮತ್ತಿತರರು ಹಾಜರಿದ್ದರು.**

## ಪ್ರತ್ಯೇಕ ಅಪಘಾತ: ಮೂವರ ಸಾವು

• ಪ್ರಜೋದಯ ವರದಿ

**ಹಾಸನ:** ಚನ್ನರಾಯಪಟ್ಟಣ ಗ್ರಾಮಾಂತರ ಹಾಗು ಅರಸೀಕೆರೆ ತಾಲ್ಲೂಕು ಗಂಡಸಿ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಮೂವರು ಮೃತಪಟ್ಟಿದ್ದಾರೆ.

ಅಪರಿಚಿತ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಅರಸೀಕೆರೆ ತಾಲ್ಲೂಕು ಜಕ್ಕನಹಳ್ಳಿ ಗೇಟ್ ಹತ್ತಿರ ನಡೆದಿದೆ. ಲಾಳನಕೆರೆ ಗ್ರಾಮದ ಸಚಿನ್ ಮೃತರು. ಸೆ.13ರ ರಾತ್ರಿ ಗಂಡಸಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಗಣೇಶ ವಿಸರ್ಜನಾ ಮೆರವಣಿಗೆ ವೀಕ್ಷಣೆಗಾಗಿ ತೆರಳಿದ್ದ ಯುವಕ ರಾತ್ರಿ 1 ಗಂಟೆ ಸಮಯದಲ್ಲಿ ಮನೆಗೆ ವಾಪಾಸ್ಸಾಗುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಅಪರಿಚಿತ ವಾಹನ ಡಿಕ್ಕಿಯಾಗಿದೆ. ಗಂಭೀರ ಗಾಯಗಳಾಗಿ ಸಚಿನ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕಾರು ಡಿಕ್ಕಿಯಾಗಿ ಬೈಕ್ ಸವಾರರಿಬ್ಬರು ಮೃತಪಟ್ಟಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕು ರಾಷ್ಟ್ರೀಯ ಹೆದ್ದಾರಿ 75ರ ಅಣ್ಣೇನಹಳ್ಳಿ ಗೇಟ್ ಸಮೀಪ ನಡೆದಿದೆ.

ಶಾಂತಿಗ್ರಾಮ ಹೋಬಳಿ ಕಾಚನಾಯಕನಹಳ್ಳಿಯ ಚನ್ನವೀರಶೆಟ್ಟಿ, ಹೊಳೆನರಸೀಪುರ ತಾಲ್ಲೂಕು ಬಾರೆ ಹೊಸೂರು ಗ್ರಾಮದ ಪುಟ್ಟರಾಜು ಮೃತರು.

ಗಾರೆ ಕೆಲಸಗಾರರಾಗಿದ್ದ ಇಬ್ಬರೂ ಕೆಲಸ ನೋಡಿಕೊಂಡು ಬರಲೆಂದು ಬೈಕ್‌ನಲ್ಲಿ ಬರುತ್ತಿದ್ದರು. ರಸ್ತೆ ದಾಟುತ್ತಿದ್ದಾಗ ಉದಯಪುರ ಕಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿ ಬೈಕ್ ಮೇಲಿಂದ ಹಾರಿ ಬಿದ್ದಿದ್ದಾರೆ. ಗಂಭೀರ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಗಾಂಜಾ ಸೊಪ್ಪು ವಶ : ಇಬ್ಬರ ಬಂಧನ

**ಅರಸೀಕೆರೆ:** ಅಕ್ರಮವಾಗಿ ಗಾಂಜಾ ಸೊಪ್ಪು ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬಂಧಿಸಿರುವ ನಗರ ಠಾಣೆ ಪೊಲೀಸರು 45 ಸಾವಿರ ರೂ. ಮೌಲ್ಯದ 225 ಗ್ರಾಂ ಗಾಂಜಾ ಸೊಪ್ಪು ವಶಪಡಿಸಿಕೊಂಡಿರುವ ಘಟನೆ ನಡೆದಿದೆ.

ನಗರದ ಅವೇಜ್ ಖಾನ್, ಸುಹೀಲ್ ಬಂಧಿತರು. ಭಾನುವಾರ ಮಧ್ಯಾಹ್ನ ಎಪಿಎಂಸಿ ಗೇಟ್ ಹತ್ತಿರ ಗಾಂಜಾ ಸೊಪ್ಪು ಮಾರಾಟ ಮಾಡುತ್ತಿದ್ದಾರೆಂಬ ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದ್ದರು. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜಂಗಮರು ಅವಿವೇಕಿಗಳಲ್ಲ: ಸಾಣೇನಹಳ್ಳಿ ಶ್ರೀ ಹೇಳಿಕೆಗೆ ಖಂಡನೆ

• ಪ್ರಜೋದಯ ವರದಿ




**ಹಾಸನ:** ಕಲಬುರಗಿಯಲ್ಲಿ ಇತ್ತೀಚಿಗೆ ನಡೆದ ಬಸವ ಸಂಸ್ಕೃತಿ ಅಭಿಯಾನದಲ್ಲಿ ಸಾಣೇನಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ ಅವರು, ಜಂಗಮ ಸ್ವಾಮೀಜಿಗಳಿಗೆ ವಿವೇಕ ಕಡಿಮೆ ಎಂಬ ಹೇಳಿಕೆ ನೀಡಿರುವುದು ಖಂಡನೀಯವೆಂದು ಆಲೂರು ಕಾರ್ಜುವಳ್ಳಿ ಮಠದ ಶ್ರೀ ಸದಾಶಿವ ಸ್ವಾಮೀಜಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ವಿಶ್ವಗುರು ಬಸವಣ್ಣ ಅವರಿಗೆ ಸಾಂಸ್ಕೃತಿಕ ನಾಯಕ ಎಂಬ ಬಿರುದು ನೀಡಿ ಒಂದು ವರ್ಷ ಪೂರೈಸಿದ ಹಿನ್ನಲೆಯಲ್ಲಿ ರಾಜ್ಯಾದ್ಯಂತ ಬಸವ ಸಂಸ್ಕೃತಿ ಅಭಿಯಾನ ಹಮ್ಮಿಕೊಂಡಿರುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಸಾಣೇನಹಳ್ಳಿ ಶ್ರೀಗಳು ಜಂಗಮರ ಕುರಿತು ಹಗುರವಾಗಿ ಮಾತನಾಡಿದ್ದು ನೋವು ತರಿಸಿದೆ ಎಂದರು.

ವೀರಶೈವ-ಲಿಂಗಾಯತ ಧರ್ಮದಲ್ಲಿ ಜಂಗಮ ಸ್ವಾಮೀಜಿಗಳ ಪಾತ್ರ ಮಹತ್ವದ್ದಾಗಿದೆ. ಸಿದ್ಧಾಂತ ಶಿಖಾಮಣಿಯ ತತ್ವಗಳೊಂದಿಗೆ ರೇಣುಕ ಲೀಲೆ, ಬಸವಾದಿ ಶಿವಶರಣರ ಪ್ರಸಾರ, ವಚನ, ಶರಣ ಲೀಲಾಮೃತ, ಪುರಾಣ ಪ್ರವಚನಗಳ ಮೂಲಕ ಭಕ್ತ ಸಮುದಾಯದಲ್ಲಿ ಸಂಸ್ಕಾರಯುಕ್ತ ಸದೃಢ ಸಮಾಜ ನಿರ್ಮಾಣ ಮಾಡಿದ್ದಾರೆಂದರು.

ಭಕ್ತ-ಜಂಗಮರ ಸಂಬಂಧ ಅವಿನಾಭಾವ. ಜನರು ಜಂಗಮರನ್ನು ಸಾಕ್ಷಾತ್ ಪರಶಿವನೇ ಮನೆಗೆ ಬಂದ ಎಂಬ ಭಾವದಿಂದ ಪಾದ ಪೂಜೆ ಮಾಡಿ ಫಲ-ತಾಂಬೂಲ-ದಕ್ಷಿಣೆ, ಧಾನ್ಯಗಳನ್ನು ಸಮರ್ಪಿಸುವ ಪರಂಪರೆ ಇಂದಿಗೂ ಮುಂದುವರಿದಿದೆ. ಬಸವಣ್ಣನವರು ಜಂಗಮರ ಮಹತ್ವವನ್ನು ವಚನಗಳಲ್ಲಿ ಉಲ್ಲೇಖಿಸಿದ್ದಾರೆ. ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಅಳಿವಿಲ್ಲ ವೆಂಬ ಹೇಳಿಕೆಯೇ ಅವರ ಪ್ರಾತಿನಿಧ್ಯ ತೋರಿಸುತ್ತದೆಂದರು.

ಜಂಗಮ ಸ್ವಾಮಿಗಳು ಜಾತಿ-ಕುಲ-ಲಿಂಗ ಭೇದವಿಲ್ಲದೆ ಶಿಶುವಿನಿಂದ ಅಂತ್ಯಕ್ರಿಯೆಯ ವರೆಗೂ ಎಲ್ಲಾ ಧಾರ್ಮಿಕ ಸಂಸ್ಕಾರಗಳನ್ನು ನೆರವೇರಿಸುತ್ತಾರೆ. ಅವರ ಪಾದ ಶವದ ಮೇಲೆ ಇಟ್ಟು ಆಶೀರ್ವಾದ ನೀಡುವುದರಿಂದ ಆ ಶವ ಶಿವನಾಗುತ್ತದೆಂಬ ಭಕ್ತಿ ಪರಂಪರೆಯ ನಂಬಿಕೆ ಇದೆ. ಇಂತಹ ಮಹತ್ವದ ಸೇವೆ ನಿರ್ವಹಿಸುತ್ತಿರುವ ಜಂಗಮ ಸ್ವಾಮೀಜಿಗಳನ್ನು ವಿವೇಕವಿಲ್ಲದವರಂತೆ ಚಿತ್ರಿಸುವುದು ಅವರ ಮಾನಸಿಕ ಶೋಷಣೆ ಮಾಡುತ್ತಿರುವಂತಾಗಿದೆ ಎಂದರು.

ಜಂಗಮ ಸ್ವಾಮಿಗಳು ಕೇವಲ ಒಂದು ಜಾತಿ, ವರ್ಗಕ್ಕೆ ಸೇರಿದವರಲ್ಲ. ಅವರು ಸಮಸ್ತ ಸಮಾಜದ ಹಿತ ಬಯಸುವವರು. ಆದರೂ ಅವರನ್ನು ಜಾತಿ ಆಧಾರದಲ್ಲಿ ಕೀಳಾಗಿ ಕಂಡಿರುವ ಸಾಣೇಹಳ್ಳಿ ಶ್ರೀಗಳ ಸಂಕುಚಿತ ಭಾವನೆಯಿಂದ ಸಮಾಜಕ್ಕೆ ಧಕ್ಕೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ನುಗ್ಗೇಹಳ್ಳಿ ಪುರವರ್ಗ ಮಠದ ಮಹೇಶ್ವರ ಸ್ವಾಮೀಜಿ, ಜಂಗಮ ಸಮಾಜ ಜಿಲ್ಲಾ ಗೌರವಾಧ್ಯಕ್ಷ ದೇವರಾಜ ಶಾಸ್ತ್ರಿ, ಸೋಮಶೇಖರಯ್ಯ, ಧರಣಿ ಕುಮಾರ್, ರೇಣುಕಾರಾಧ್ಯ ಇತರರಿದ್ದರು.

## ಸುಭಾಷ್ ಮೈದಾನ ಅಭಿವೃದ್ಧಿಗೆ ಕ್ರಮ

• ಪ್ರಜೋದಯ ವರದಿ



**ಸಕಲೇಶಪುರ:** ಪಟ್ಟಣದ ಸುಭಾಷ್ ಮೈದಾನವನ್ನು ಅತ್ಯಾಧುನಿಕವಾಗಿ ಅಭಿವೃದ್ಧಿಪಡಿಸಲು ಸಮಗ್ರ ಯೋಜನೆ ರೂಪಿಸುವಂತೆ ಶಾಸಕ ಸಿಮೆಂಟ್ ಮಂಜು ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಪಟ್ಟಣದ ಸುಭಾಷ್ ಮೈದಾನಕ್ಕೆ ಭೇಟಿ ನೀಡಿ ಕ್ರೀಡಾಂಗಣ ಪರಿಶೀಲಿಸಿ ಮಾತನಾಡಿದ ಅವರು, ಮೈದಾನವನ್ನು ಎಷ್ಟು ಸ್ವಚ್ಛಗೊಳಿಸಿದರೂ ಮತ್ತೆ ಹುಲ್ಲು ಬೆಳೆದು ದುಸ್ಥಿತಿ ನಿರ್ಮಾಣವಾಗಿದೆ. ತಾಲ್ಲೂಕಿನ ಹವಾಮಾನ ಆರು ತಿಂಗಳು ಮಳೆ, ಆರು ತಿಂಗಳು ಬಿಸಿಲು ಕಂಡುಬರುವುದರಿಂದ ಒಳಾಂಗಣ ಕ್ರೀಡಾಂಗಣ ನಿರ್ಮಾಣವಾದರೆ ಅನುಕೂಲಕರ. ಈ ನಿಟ್ಟಿನಲ್ಲಿ ಅಧಿಕಾರಿಗಳನ್ನು ಕರೆದು ಅಂದಾಜು ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿ, ಅನುದಾನ ನೀಡುವಂತೆ ಮನವಿ ಮಾಡುತ್ತೇನೆ. ಸರ್ಕಾರ ಅನುದಾನ ನೀಡಿದರೆ ಶೀಘ್ರದಲ್ಲೇ ಒಳಾಂಗಣ ಕ್ರೀಡಾಂಗಣಗಳನ್ನು ನಿರ್ಮಿಸಿ, ಯುವಕರಿಗೆ ಮಳೆಗಾಲದಲ್ಲಿಯೂ ದೈಹಿಕ ಅಭ್ಯಾಸ ಮಾಡಲು ಅನುಕೂಲ ಕಲ್ಪಿಸಬಹುದೆಂದು ಹೇಳಿದರು.

ಮೈದಾನದಲ್ಲಿ ಅಕ್ರಮವಾಗಿ ಕಸ ಹಾಕುತ್ತಿರುವುದರಿಂದ ಆಟ ಆಡಲು ಸಮಸ್ಯೆಯಾಗುತ್ತಿದೆ. ಶೌಚಾಲಯ ಹಾಗೂ ವಿದ್ಯುತ್ ಸಂಪರ್ಕವನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಸ್ಥಳೀಯರು ಹಾಗೂ ಯುವಕರು ಸ್ವಚ್ಛತೆಗೆ ಆದ್ಯತೆ ನೀಡಿ, ಸ್ವಚ್ಛತಾ ಅಭಿಯಾನದಂತೆ ಕೈಜೋಡಿಸಿದರೆ ಮೈದಾನವನ್ನು ಸುಸ್ಥಿತಿಯಲ್ಲಿ ಉಳಿಸಿಕೊಳ್ಳಬಹುದೆಂದರು.

ನಿರ್ಮಿತಿ ಕೇಂದ್ರದ ಪ್ರಸನ್ನ ಇನ್ನಿತರರು ಉಪಸ್ಥಿತರಿದ್ದರು.

## ನಾಳೆ ತೇರಾಪಂಥ್ ಪರಿಷತ್‌ನಿಂದ ರಕ್ತದಾನ ಶಿಬಿರ




• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ತೇರಾಪಂಥ್ ಯುವಕ ಪರಿಷತ್‌ನಿಂದ ಸೆ.17ರ ಬುಧವಾರ ಜಿಲ್ಲೆಯ 13 ಕಡೆ ರಕ್ತದಾನ ಅಮೃತ ಮಹೋತ್ಸವ 2.0 ಬೃಹತ್ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತೀಯ ತೇರಾಪಂಥ್ ಯುವಕ್ ಪರಿಷತ್ ಪದಾಧಿಕಾರಿ ಜಯಂತ್ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಜೈನ ಶ್ವೇತಾಂಬರ ತೇರಾಪಂಥ್ ಸಮಾಜದ 11ನೇ ಆಚಾರ್ಯ ಶ್ರೀ ಮಹಾಶ್ರಮಣ್ ಜೀ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಕಳೆದ ವರ್ಷ ಹಮ್ಮಿಕೊಂಡಿದ್ದ ಶಿಬಿರದಲ್ಲಿ ಸಂಗ್ರಹವಾಗಿದ್ದ 5.45 ಯೂನಿಟ್ ರಕ್ತವನ್ನು ವಿವಿಧ ರಕ್ತನಿಧಿ ಕೇಂದ್ರಗಳಿಗೆ ವಿತರಿಸಿ ಅವಶ್ಯಕತೆ ಇರುವವರಿಗೆ ನೆರವಾಗಿ ದ್ದೇವೆಂದರು.

ಬುಧವಾರ ಹಾಸನದ ತೇರಾಪಂಥ್ ಸಭಾ ಭವನ, ಫೆಡರಲ್ ಬ್ಯಾಂಕ್, ರಾಜೀವ್ ಸಮೂಹ ಸಂಸ್ಥೆಗಳು, ನವಕೀಸ್ ಇಂಜಿನೀಯರಿಂಗ್ ಕಾಲೇಜು, ಹಾರನಹಳ್ಳಿ ರಾಮಸ್ವಾಮಿ ಸಂಸ್ಥೆ, ಸರ್ಕಾರಿ ವಿಜ್ಞಾನ ಕಾಲೇಜು, ಎಸ್‌ಡಿಎಂ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ, ಮಲೆನಾಡು ತಾಂತ್ರಿಕ ಕಾಲೇಜು, ಸೆಂಟ್ರಲ್ ಕಾಮರ್ಸ್ ಕಾಲೇಜು, ಸಕಲೇಶಪುರದ ತೇರಾಪಂಥ್ ಸಭಾಭವನ, ಚನ್ನರಾಯಪಟ್ಟಣದ ಶ್ರೀ ಆಂಜನೇಯ ದೇವಸ್ಥಾನ ಮತ್ತು ಹೊಳೆ ನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶಿಬಿರ ಏರ್ಪಡಿಸಲಾಗಿದೆ ಎಂದು ಹೇಳಿದರು.

ಪರಿಷತ್ ಅಧ್ಯಕ್ಷ ನಿತೇಶ್ ಸುರಾನಾ, ಕಾರ್ಯದರ್ಶಿ ಮನಿಶ್ ಟಾಟೇಡ್, ವಿಕಾಸ್ ಬನ್ಸಾಲಿ, ಹನ್ಮುಲ್ ಕೊಠಾರಿ, ವಿನಯ್ ಕೊಠಾರಿ ಹಾಜರಿದ್ದರು.

## ಅಂಬೇಡ್ಕರ್ ವಿವಿದೋದ್ದೇಶ ಸಂಘಕ್ಕೆ 1.96 ಲಕ್ಷ ರೂ. ನಿವ್ವಳ ಲಾಭ

• ಪ್ರಜೋದಯ ವರದಿ



**ಅರಕಲಗೂಡು:** ಡಾ.ಬಿ.ಆರ್.ಅಂಬೇಡ್ಕರ್ ವಿವಿದೋದ್ಧೇಶ ಸಹಕಾರ ಸಂಘ 2024-25ನೇ ಸಾಲಿಗೆ 1,96,840 ರೂ. ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಡಿ.ರಾಮು ಅವರು ತಿಳಿಸಿದರು.

ಪಟ್ಟಣದ ದೇವರಾಜು ಅರಸು ಭವನದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ 2024-25ನೇ ಸಾಲಿನ ಸಂಘದ ಲಾಭ ನಷ್ಟದ ಬಗ್ಗೆ ವರದಿ ಮಂಡಿಸಿದರು. 2.12 ಲಕ್ಷ ರೂ. ಸಿಬ್ಬಂದಿ ವೆಚ್ಚ, ಜಮಾ ಖರ್ಚು 1.041 ಲಕ್ಷ ರೂ., ಕಾದಿರಿಸಿದ ಲೆಕ್ಕಗಳು 25 ಸಾವಿರ, ನಿವ್ವಳ ಲಾಭ 1.96,840 ರೂ. ಆಗಿದೆ. ಸದಸ್ಯರ ಸಾಲದ ಬಡ್ಡಿ 4.89 ಲಕ್ಷ ರೂ., ಬ್ಯಾಂಕ್ ಉಳಿತಾಯ ಖಾತೆ 10 ಸಾವಿರ ರೂ., ಪಿಗ್ಮಿ ಸೇವಾ ಶುಲ್ಕ 15 ಸಾವಿರ ರೂ., ಇ-ಸ್ಟಾಪಿಂಗ್ ಸೇವಾ ಶುಲ್ಕ 22 ಸಾವಿರ ರೂ. ಹಾಗೂ ಇತರೆ ಸೇರಿ ಸಂಘ 5ಲಕ್ಷದ 38 ಸಾವಿರ ರೂ. ವಹಿವಾಟು ನಡೆಸಿದೆ ಎಂದು ಮಾಹಿತಿ ನೀಡಿದರು.

ಹೆಚ್‌ಡಿಸಿಸಿ ಬ್ಯಾಂಕ್ ಅರಕಲಗೂಡು ಶಾಖೆಯಲ್ಲಿ ಸಂಘ 6.31 ಲಕ್ಷವನ್ನು ಉಳಿತಾಯ ಮಾಡಿದೆ. ಸಂಘದ ಸದಸ್ಯರಿಗೆ 30 ಲಕ್ಷ ರೂ. ವ್ಯಾಪಾರ ಸಾಲವನ್ನು ನೀಡಲಾಗಿದೆ. 31 ಲಕ್ಷ ರೂ. ಪಿಗ್ಮಿ ಠೇವಣಿಯನ್ನು ಹೊಂದಲಾಗಿದೆ. ಸಂಘ 2025ರ ಮಾರ್ಚ್ 31ರ ಅಂತ್ಯಕ್ಕೆ 40 ಲಕ್ಷ ರೂ. ವಹಿವಾಟು ನಡೆಸಿದೆ ಎಂದು ಹೇಳಿದರು.

ಸಂಘದ ಸದಸ್ಯರು 5 ವಾರ್ಷಿಕ ಸಭೆಗಳ ಪೈಕಿ ಕನಿಷ್ಟ ಎರಡು ವಾರ್ಷಿಕ ಸಭೆಗೆ ಹಾಜರಾಗಬೇಕಿದೆ. ಎರಡು ವರ್ಷಗಳ ಅವಧಿಯಲಿ 5 ಸಾವಿರ ರೂ. ವ್ಯವಹಾರ ನಡೆಸುವುದು ಕಡ್ಡಾಯವಾಗಿದೆ. ಇಲ್ಲವಾದರೇ ಚುನಾವಣೆಯಲ್ಲಿ ಮತ ಚಲಾಯಿಸುವ ಮತ್ತು ಸ್ಪರ್ಧಿಸುವ ಅಧಿಕಾರವು ಸಹಕಾರ ಸಂಘಗಳ ನಿಯಮಗಳಿಗೆ ಒಳಪಟ್ಟಿದೆ. ಸದಸ್ಯರು ಅದನ್ನು ಅರ್ಥಮಾಡಿಕೊಂಡು ಸಹಕರಿಸಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ಸಂಘದ ನಿರ್ದೇಶಕರಾದ ಕೃಷ್ಣಯ್ಯ, ಚನ್ನಯ್ಯ, ಮಂಜುನಾಥ್, ಅನಿಕೇತನ್, ರಮೇಶ್, ಅಧಿಕಾರಿ ವೆಂಕಟಚಲಾ ಹಾಗೂ ಸದಸ್ಯರು ಉಪಸ್ಥಿತರಿದ್ದರು.




## ಭಾರತ್ ಗ್ಯಾಸ್ ವಿತರಕರಿಂದ ಎಲ್‌ಪಿಜಿ ಪಂಚಾಯತ್

**ಹಾಸನ:** ಮನೆಗಳಲ್ಲಿ ಅಡುಗೆ ಅನಿಲ ಉಪಯೋಗಿಸುವ ವಿಧಾನ, ಅಪಾಯ ಸಂಭವಿಸದಂತೆ ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಭಾರತ್ ಗ್ಯಾಸ್ ವಿತರಕರು ನಗರದ ಬಾಲಕಿ ಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಎಲ್‌ಪಿಜಿ ಪಂಚಾಯತ್ ಅರಿವು ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಗೆ ರಸ ಪ್ರಶ್ನೆ ಏರ್ಪಡಿಸಲಾಗಿತ್ತು. ಭಾರತ್ ಗ್ಯಾಸ್ ಹಿರಿಯ ಮಾರಾಟ ಅಧಿಕಾರಿ ಅನಂತರಾವ್ ಅವರು ಮಾತನಾಡಿ, ಸಿಲಿಂಡರ್ ಬಳಸು ವಾಗ ಕುಟುಂಬಸ್ಥರು ಜಾಗರೂಕರಾಗಿರಬೇಕು. ಇಂದಿನ ವಿದ್ಯಾರ್ಥಿಗಳೇ ನಾಳೆಯ ಸಂಸಾರಿ ಗಳು. ಅವರಿಗೆ ಈಗಿನಿಂದಲೇ ಸರಿಯಾದ ಮಾರ್ಗದರ್ಶನ ನೀಡುವುದು ಅಗತ್ಯವೆಂದು ಹೇಳಿದರು.

## ಸೆ.16-17 ರಂದು ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ಮುಗುಳುವಳ್ಳಿ ಸ್ವೀಕರಣಾ ಕೇಂದ್ರದಲ್ಲಿ 66 ಕೆ.ವಿ. ಬೇನಲ್ಲಿ ತುರ್ತು ನಿರ್ವಹಣಾ ಕೆಲಸ ಹಮ್ಮಿಕೊಂಡಿರುವುದರಿಂದ ಸೆ.16ರ ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ 66/11 ಕೆ.ವಿ. ಹಳೇಬೀಡು ಮತ್ತು ಗಂಗೂರು ವಿ.ವಿ. ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಪ್ರದೇಶಗಳ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

**ಹೊಳೆನರಸೀಪುರ:** ತಾಲ್ಲೂಕಿನ ಹಂಗರಹಳ್ಳಿ ಉಪ ವಿಭಾಗದ ದೊಡ್ಡಕುಂಚೇವು ಶಾಖಾ ವ್ಯಾಪ್ತಿಗೆ ಬರುವ ಹಡವನಹಳ್ಳಿ ವಿ.ವಿ. ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಎಫ್ 6-ಮಾರಶೆಟ್ಟಿಹಳ್ಳಿ ನಿರಂತರ ಜ್ಯೋತಿ ಮಾರ್ಗ ನಿರ್ವಹಣೆ ಕೆಲಸ ಮಾಡಬೇಕಾಗಿರುವುದರಿಂದ ಸೆ.17ರ ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ತಟ್ಟೆಕೆರೆ, ಉಣ್ಣೇನಹಳ್ಳಿ, ಕೆ.ಕೆ.ಹೊಸೂರು, ಗುಳಿ ಸಾತೇನಹಳ್ಳಿ, ಮಾರಶೆಟ್ಟಿಹಳ್ಳಿ, ಮಲ್ಲಸಮುದ್ರ, ಕಟ್ಟೆಹೊಸಳ್ಳಿ ಹಾಗೂ ಈ ಗ್ರಾಮಗಳ ಸುತ್ತಮುತ್ತಲಿನ ಗ್ರಾಮಗಳಿಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ತಿಳಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019